16

# ಕ್ರೈಸ್ತರು ಮತ್ತು ಸರಕಾರ

# (5:12-42)

ನಮ್ಮ ಹಿಂದಿನ ಪಾಠದಲ್ಲಿ, ಅಧ್ಯಾಯ 5:12-42ರಲ್ಲಿ ನಾವು ಅಪೊಸ್ತಲರ ಎರಡನೆಯ ಹಿಂಸೆಯ ಬಗೆಗೆ ಅಧ್ಯಯನ ಮಾಡಿದೆವು. ಇದನ್ನು ಓದುವವರು ಅಪೊಸ್ತಲರು ಎದುರಿಸಿದ ಸವಾಲನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುತ್ತಾರೆ. ಹಿಂದೆ, ಅವರು ಬೆದರಿಕೆಗೆ ಒಳಗಾಗಿದ್ದರು ಮತ್ತು ಯೇಸುವಿನ ಹೆಸರಿನಲ್ಲಿ ಬೋಧಿಸುವುದನ್ನು ನಿಲ್ಲಿಸಲು ಆಜ್ಞಾಪಿಲ್ಪಟ್ಟಿದ್ದರು. ಕೆಲವರು ಸೆರೆಹಿಡಿಯಲ್ಪಟ್ಟರು ಮತ್ತು ಹೊಡೆಯಲ್ಪಟ್ಟರು; ಕೆಲವರು ತಮ್ಮ ನಂಬಿಕೆಗೋಸ್ಕರ ಮರಣವನ್ನೂ ಹೊಂದಿದರು. ದೇವರಿಗೆ ಅಥವಾ ಮನುಷ್ಯರಿಗೆ ವಿಧೇಯರಾಗುವುದಕ್ಕೆ ಸಂಬಂಧಿಸಿದ ವಿಷಯವು ಸ್ಫಟಿಕದಷ್ಟೆ ಸ್ಪಷ್ಟವಾಗಿತ್ತು. ನಮ್ಮಲ್ಲಿ ಅನೇಕರಿಗೆ ಇಂಥ ವಿಷಯಗಳು ಸ್ಪಷ್ಟವಾಗಿರಲಿಕ್ಕಿಲ್ಲ. ನಮ್ಮ ಮುಂದಿನ "ಸರಕಾರದ ಅಧಿಕಾರಿಗಳ" ಒಂದಿಗಿನ ವಿಷಯದ ಕುರಿತು ನಾವು ಆಳವಾದ ಚಿಂತನೆ ಮಾಡುವದು ಮೌಲ್ಯವಾದುದು ಆಗಿದೆ (ರೋಮಾಪುರ 13:1).

## ಮೂಲಭೂತ ನಿಯಮ: ದೇಶದ ನಿಯಮಗಳಿಗೆ ವಿಧೇಯರಾಗಿರಿ

ಇಲ್ಲಿಯವರೆಗೆ ಮೂರು ತತ್ವಗಳು ನಮ್ಮ ಅಧ್ಯಯನದಲ್ಲಿ ಸ್ಥಾಪಿತವಾಗಿವೆ. ನಾವು ಅವುಗಳನ್ನು ಪುನ ಅವಲೋಕಿಸೋಣ, ಅವುಗಳನ್ನು ವಿವರಿಸೋಣ, ಮತ್ತು ಅವುಗಳನ್ನು ಅನ್ವಯಿಸಿಕೊಳ್ಳೋಣ ಮೊದಲನೆಯ ತತ್ವವು, ಸಾಮಾನ್ಯ ನಿಯಮದಂತೆ ಇದ್ದು, ನಾವು ವಾಸಿಸುವವ ಕಡೆಗಿನ ದೇಶದ ನಿಯಮಗಳಿಗೆ ವಿಧೇಯರಾಗಿರಬೇಕು ಎಂಬುದೇ. ಜಗತ್ತಿನಾದ್ಯಂತದ ಸಮಸ್ಯೆ ಎಂದರೆ ಅಧಿಕಾರಿಗಳಿಗೆ ಗೌರವನೀಡದೇ ಇರುವುದೆ ಆಗಿದೆ. ಹಳೆಯ ಒಡಂಬಡಿಕೆಯ ಸಮಯದಲ್ಲಿ, "ಪ್ರತಿಯೊಬ್ಬನೂ ತನ್ನ ಕಣ್ಣಿಗೆ ಯಾವುದು ಸರಿ ಎನ್ನಿಸುತ್ತದೆಯೋ ಅದನ್ನೆ ಮಾಡುತ್ತಿದ್ದನು" (ನ್ಯಾಯಸ್ಥಾಪಕರು 21:25), ಆದ್ದರಿಂದ ಅವ್ಯವಸ್ಥೆಯು ಆಳತೊಡಗಿತು.

ನಾವು ಪ್ರಜಾಸರಕಾರಕ್ಕೆ ವಿಧೇಯರಾಗಿರಬೇಕು, ಆದರೆ ಸರಕಾರವು ಯಾವಾಗಲೂ ಸರಿಯಾಗಿರುತ್ತದೆ ಎಂದಲ್ಲ, ಅಥವಾ ಯಾವಾಗಲೂ ಒಳ್ಳೆಯದನ್ನು ಮಾಡುತ್ತದೆ ಎಂದೂ ಅಲ್ಲ. ಪೇತ್ರ ಮತ್ತ ಯೋಹಾನರು ಇಲ್ಲಿ ಮಾತನಾಡುತ್ತಿರುವದು ನೀರೋಚಕ್ರವರ್ತಿ ಆಳುತ್ತಿದ್ದ ರೋಮ ಸರಕಾರದ ಬಗೆಗೆ. ನಾವು ದೇಶದ ನಿಯಮಗಳಿಗೆ ವಿಧೇಯರಾಗಬೇಕು ಯಾಕಂದರೆ ನಾವು ಅವುಗಳೊಡನೆ ಒಡಂಬಡುತ್ತೇವೆ ಎಂದಲ್ಲ ಅಥವಾ ಅವುಗಳು ಅರ್ಥಪೂರ್ಣವಾ ದವುಗಳು ಎಂದೂ ಅಲ್ಲ. ಆದರೆ ಇದು ದೇವರ ಚಿತ್ತವಾಗಿರುವುದರಿಂದ ಅವುಗಳಿಗೆ ವಿಧೇಯರಾಗುತ್ತೇವೆ. ಪೌಲನು ಪ್ರಜಾ ಸರಕಾರವು "ದೇವರಿಂದಾಗಿದೆ" ಎಂದು ಹೇಳುತ್ತಾನೆ ಮತ್ತು ಪ್ರಜಾ ಅಧಿಕಾರಿಗಳು "ದೇವರ ಸೇವಕರಂತೆ" ವರ್ತಿಸುತ್ತಾರೆ ಎಂದು ಹೇಳುತ್ತಾನೆ (ರೋಮಾಪುರ 13:1, 4). ಪೇತ್ರನು "*ದೇವರಿಗಾಗಿ* ನಿಮ್ಮನ್ನು ನೀವು ಒಪ್ಪಿಸಿಕೊಳ್ಳಿರಿ ... ಇದು ದೇವರ ಚಿತ್ತವಾಗಿದೆ" ಎಂದು ಹೇಳಿದ್ದಾನೆ (1 ಪೇತ್ರನು 2:13, 15; ಒತ್ತಿ ಹೇಳಿದ್ದು ನನ್ನದು).

## ಮೂಲ ಅಪವಾದ: ದೇಶದ ನಿಯಮವು ದೇವರ ನಿಯಮಗಳನ್ನು ಅತಿಕ್ರಮಿಸಿದಾಗ

ಎರಡನೆಯ ತತ್ವವು ನಿಯಮಕ್ಕೆ ಹೊರತಾದುದು ಆಗಿದೆ, ಮಾನವ ನಿಯಮವು ದೇವರ ನಿಯಮದೊಂದಿಗೆ ನೇರವಾಗಿ ಸಂಘರ್ಷಕ್ಕೆ ಇಳಿಯುತ್ತದೆ. ಅಪೊಸ್ತಲರ ಕೃತ್ಯಗಳು 4 ಮತ್ತು

5ರಲ್ಲಿ ಸಂಘರ್ಷಗಳು ಸ್ಪಷ್ಟವಾಗಿದೆ: ಜನರು "ಯೇಸುವಿನ ಹೆಸರಿನಲ್ಲಿ ಬೋಧಿಸ*ಬೇಡ*" ಎಂದು ಹೇಳುತ್ತಾರೆ, ದೇವರು "ಯೇಸುವಿನ ಹೆಸಲಿನಲ್ಲಿ *ಬೋಧಿಸು*" ಎಂದು ಹೇಳುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ ಫರೋಹನು "ಎಲ್ಲ ಗಂಡು ಶಿಶುಗಳನ್ನು ಕೊಲ್ಲಿರಿ" ಎಂದು ಅಪ್ಪಣೆಕೊಟ್ಟನು (ವಿಮೋಚನಕಾಂಡ 1:15-22). ಆದರೆ ದೇವರು "ಕೊಲ್ಲಬೇಡ"[1] ಎಂದು ಹೇಳಿದನು. ಹೆಚ್ಚಿನವುಗಳಲ್ಲಿ ಇತ್ತೀಚಿನ ದಿನಗಳಲ್ಲಿ ಜನರು "ದೇವರನ್ನು ಆರಾಧಿಸಲು ನೀವು ಒಟ್ಟಾಗಿ ಕೂಡಿಬರಬಾರದು" ಎಂದು ಹೇಳಿದರು. ಆದರೆ ದೇವರು "ಸಭೆಯಾಗಿ ಕೂಡಿಕೊಳ್ಳುವುದನ್ನು ರೂಢಿಯಾಗಿ ಬಿಟ್ಟಿರುವ ಪ್ರಕಾರ ಬಿಟ್ಟುಬಿಡದೆ" ಕೂಡಿಬರಲು ಹೇಳುತ್ತಾನೆ (ಇಬ್ರಿಯ 10:25) ಜನರು "ನಿನ್ನ ನೆರೆಯವರಿಗೆ ಬೈಬಲನ್ನು ಬೋಧಿಸಬೇಡ" ಎಂದು ಹೇಳಿದರೆ, ದೇವರು "ಪ್ರತಿಯೊಂದೂ ಜೀವಿಗೂ ಸುವಾರ್ತೆಯನ್ನು ಬೋಧಿಸು" ಎಂದು ಹೇಳುತ್ತಾನೆ (ಮಾರ್ಕ 16:15). ಸಂಘರ್ಷಗಳು ಸ್ಪಷ್ಟವಾಗಿರುವಾಗ ದೇವರ ಚಿತ್ತಕ್ಕೆ ಯಾರು ಒಪ್ಪಿಸಿಕೊಂಡಿರುತ್ತಾರೋ ಬೇರೆ ಯಾವ ಆಯ್ಕೆಯೂ ಇಲ್ಲವೆಂದು ಸಂಕಲ್ಪಮಾಡುತ್ತಾನೆ. "ಉಪಾಯವು ಯಾವದು?" ಅಥವಾ "ಜನಪ್ರಿಯವಾದುದು ಯಾವದು?" ಅಥವಾ "ಯಾವುದು ಸುರಕ್ಷಿತ?" ಎಂದು ಆತನನ್ನು ಕೇಳಲಿಕ್ಕಾಗದು. ಆತನು ಕೇವಲ "ಯಾವುದು ಸರಿಯಾಗಿದೆ?" ಎಂದು ಕೇಳಬಹುದಾಗಿದೆ ಮತ್ತು ಅದಕ್ಕೆ ತಕ್ಕಂತೆ ನಡೆಯಬೇಕಾಗಿದೆ.

ಅಮೇರಿಕದಲ್ಲಿ ಇಂದು, ಅನೇಕ ನಂಬುಗೆಗಳು "ರಾಜಕೀಯವಾಗಿ ಸರಿಯಾಗಿಲ್ಲದವುಗಳು" ಆಗಿರುತ್ತವೆ. ಕೆಲ ಪ್ರಕರಣಗಳಲ್ಲಿ, ಅಪರಾಧವನ್ನು ತಡೆಯಲು, ನಾವು ಕೆಲ ಒಲವುಗಳನ್ನು ಅನುಸರಿಸುತ್ತೇವೆ ಮತ್ತು ಅನುಸರಿಸಲೇಬೇಕು.[2] ಹೇಗೋ, "ರಾಜಕೀಯವಾಗಿ ತಪ್ಪಾದವುಗಳು" ಸತ್ಯವೇದೀಯವಾಗಿ ತಪ್ಪಾಗಿರುವುದಿಲ್ಲ. ಉದಾಹರಣೆಗಾಗಿ, ಸಲಿಂಗಕಾವನ್ನು ನಿಂದಿಸುವದು "ರಾಜಕೀಯವಾಗಿ ತಪ್ಪಾದುದು" ಆದರೆ ಬೈಬಲ್ ಬೋಧಿಸುವುದೇನಂದರೆ ಸಲಿಂಕಾಮವು ದೇವರ ದೃಷ್ಟಿಯಲ್ಲಿ ಅಸಹ್ಯವಾದುದು ಎಂದು. (ನೋಡಿ ಯಾಜಕಕಾಂಡ 18:22; 20:13; 1 ಕೊರಿಂಥ 6:9, 18.) ದೇವರ ಸಂಪೂರ್ಣ ಸಭೆಗೆ ಬೋಧಿಸುವಾಗ, ನಾವು ಸಲಿಂಗಕಾಮವು, ಕಾಮದ ಕಾರ್ಯವಾಗಿದ್ದು ನಮ್ಮ ಆತ್ಮವನ್ನು ಅದು ನಿಂದಿಸುವುದಾಗಿದೆ ಎಂದು ಹೇಳುವುದರಲ್ಲಿ ನಾವು ಅಸಹ್ಯಪಡಬಾರದು (ಗಲಾತ್ಯ 5:19-21). ನಾವು ಎಲ್ಲ ಸಲಿಂಗಕಾಮಿಗಳಿಗೆ ಪಶ್ಚಾತ್ತಾಪಪಟ್ಟು ಮತ್ತು ತಮ್ಮ ಜೀವನ ಶೈಲಿಯನ್ನು[3] ಬದಲಾಯಿಸಿಕೊಳ್ಳಲು ಕರೆನಿಡಬೇಕು. ಇಲ್ಲಿ ಬರಬೇಕಾದ ಪ್ರಶ್ನೆ ಎಂದರೆ "ರಾಜಕೀಯವಾಗಿ ಸರಿಯಾದವುಗಳು ಯಾವವು?" ಎಂದಿರದೇ "ಸತ್ಯವೇದೀಯವಾಗಿ ಏನನ್ನು ಬೋಧಿಸಲಾಗುತ್ತದೆ?" ಎಂದಿರಬೇಕು.

ಇನ್ನಿತರ ಸಂಗತಿಗಳಲ್ಲಿ, ವೈಯಕ್ತಿಯ ಆತ್ಮಸಾಕ್ಷಿ ಕೂಡ ಒಳಗೊಳ್ಳುತ್ತದೆ. ಆತ್ಮಸಾಕ್ಷಿಯು ನಮ್ಮಲ್ಲಿ ಪ್ರತಿಯೊಬ್ಬರಲ್ಲಿರುವ ಅಂತರ್ಗತವಾದ (ಸ್ವಾಭಾವಿಕವಾಗಿರುವ) ಪ್ರಜ್ಞೆ ಆಗಿದ್ದು, ಅದು ಕೆಲವು ಕೃತ್ಯಗಳು ಸರಿ ಎಂದೂ ಮತ್ತು ಕೆಲವು ತಪ್ಪು ಎಂದೂ ಹೇಳುವಂತದ್ದಾಗಿದೆ.[4] ಆತ್ಮಸಾಕ್ಷಿಯು ಸಹಜಪ್ರವೃತ್ತಿಯಾಗಿದ್ದು ಕೆಲಕಾರ್ಯಗಳು ತಪ್ಪು ಎಂದು ತಿಳಿದಿರುತ್ತದೆ; ಇತರ ವಿಚಾರಗಳಲ್ಲಿ ಆತ್ಮಸಾಕ್ಷಿಯನ್ನು ಶಿಕ್ಷಿತಗೊಳಿಸಬೇಕಾಗಿದೆ. ಸಾಂಧರ್ಭಿಕವಾಗಿ, ಗೊಂದಲಮಯವಾದ ಸಂಗತಿಗಳು ಉದ್ಭವವಾದಾಗ, "ಹೀಗೆ ಕರ್ತನು ಹೇಳಿದನು" ಎಂಬಂಥವುಗಳ ಸ್ಪಷ್ಟತೆ ಮಾರ್ಗದರ್ಶನ ಇರುವುದಿಲ್ಲ. ಆ ಸಂಗತಿಗಳನ್ನು ಪ್ರತಿಯೊಬ್ಬ ಕ್ರೈಸ್ತನೂ ದೇವವಾಕ್ಯದ ಬೆಳಕಿನಲ್ಲಿ ಜಾಗರೂಕತೆಯಿಂದ ಅಭ್ಯಸಿಸಬೇಕು ಮತ್ತು "ತನ್ನ ಮನದಲ್ಲಿ ಸಂಪೂರ್ಣವಾಗಿ ಒಪ್ಪಿತವಾಗಿರಬೇಕು" (ರೋಮಾಪುರ 14:5), ಮತ್ತು ನಂತರ ಆತನು ತನ್ನ ನಂಬುಗೆಗೆಳೊಂದಿಗೆ ಸತತವಾಗಿ ಜೀವಿಸಲು ಪ್ರಯತ್ನಿಸಬೇಕು.[5] ಸಮಯದಿಂದ ಸಮಯಕ್ಕೆ, "ಅಲ್ಲೊಂದು ಶಕ್ತಿ ಇದೆ" "ನಾನು ಮುಕ್ತಾಯವಸ್ಥೆಯಲ್ಲಿ ಇದನ್ನು ಮಾಡಲೋ ಅದನೋ" ಅಥವಾ "ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿರುವ ಇದನೋ ಅಥವಾ ಅದನೋ" ಇಂತಹ ಪ್ರತಿಕ್ರಿಯೆಗಳನ್ನು ಮಾಡುವದು ಅವಶ್ಯಕ ಎಂದು ಕ್ರೈಸ್ತರು ಕಂಡುಕೊಳ್ಳುತ್ತಾರೆ.[6]

ಸರಕಾರದ ಅಧಿಕಾರಿಗಳ ವಿರುದ್ಧ ಹೋಗುವದು ದೇವರ ದೃಷ್ಟಿಯಲ್ಲಿ ಗಂಭೀರವಾದ ವಿಷಯವಾದ್ದರಿಂದ, *ನೀನು* ಏನನ್ನು ಬಯಸುವುದಿಲ್ಲವೋ ಮತ್ತು *ದೇವರು* ಯಾವುದನ್ನು ಬಯಸುವುದಿಲ್ಲವೂ ಇವೆರಡರ ಮಧ್ಯದ ಅಂತರದ ಬಗೆಗೆ ಜಾಗರೂಕನಾಗಿರು. ಒಂದು ವೇಳೆ ನೀನು ವೈಯಕ್ತಿಕವಾಗಿ ಕೆಲ ನಿಯಮಗಳನ್ನು ಮೆಚ್ಚಲಾರದಿದ್ದರೆ, ನಿನ್ನ ಅಹಂಭಾವ ಮತ್ತು ಮೊಂಡುತನವನ್ನು ನುಂಗಿಬಿಡು ಮತ್ತು ಕೃಪಾಪೂರಿತವಾಗಿ ನಿನ್ನನ್ನು ಒಪ್ಪಿಸಿಕೊ. ಹೇಗೋ, ಒಂದುವೇಳೆ, ಕೆಲ ನಿಯಮಗಳು ದೇವರ ಚಿತ್ತಕ್ಕೆ ವಿರುದ್ಧವಾಗಿವೆ ಎಂದು ನೀನು ಹೃದಯವನ್ನು ಒಪ್ಪಿಸಿದ್ದೆ ಆದರೆ - ನಿನ್ನ ಯೋಚನೆಗೆ ಬದ್ಧನಾಗಿರು - ಆದರೆ ಬೆಲೆಯನ್ನು ತೆರುವುದಕ್ಕೆ ಸಿದ್ಧನಾಗಿರು. ಪೇತ್ರ ಮತ್ತು ಇತರ ಅಪೊಸ್ತಲರ ಮಾತುಗಳನ್ನು ನಿನ್ನ ಹೃದಯದ ಹಲಗೆಯಲ್ಲಿ ಬರೆ: "ನಾವು ಮನುಷ್ಯರ ಬದಲಾಗಿ ದೇವರಿಗೆ ವಿಧೇಯರಾಗಿರುತ್ತೇವೆ" (5:29) - ಹೊರತು "ಬಹುಶಃ ನಾವು ಮಾಡುತ್ತೇವೆ" ಅಥವಾ "ಇದು ಒಳ್ಳೆಯದಾಗಿಯೂ ಇರಬಹುದಾಗಿದೆ" ಎನ್ನದೇ "ನಾವು ಅದನ್ನು *ಮಾಡಲೇ* ಬೇಕು." ಸೆರೆಯ ಭಯವು ಎದುರಾದಾಗ, "ನಾವು ದೇವರಿಗೆ ವಿಧೇಯರಾಗಲೇ ಬೇಕು" ಎಂದು ಉತ್ತರಿಸಿದರು. ಹೊಡೆತದ ಭಯವು ಅವರಿಗೆ ಎದುರಾದಾಗ ಅವರು "ನಾವು ದೇವರಿಗೆ *ವಿಧೇಯರಾಗಲೇ* ಬೇಕು" ಎಂದು ಉತ್ತರಿಸಿದರು. ಮರಣದ ಭಯವು ಎದುರಾದಾಗ "ನಾವು ದೇವರಿಗೆ *ವಿಧೇಯರಾಗಲೇ* ಬೇಕು" ಎಂದು ಉತ್ತರಿಸಿದರು.

## ಮೂಲತತ್ವ: ಎಲ್ಲ ಸಮಯಗಳಲ್ಲಿ, ಅಧಿಕಾರಿಗಳಿಗೆ ಗೌರವವನ್ನು ತೋರಿಸಿರಿ

ಮೂರನೆಯ ತತ್ವವು ಬಹು ಮೂಲವಾದುದು ಮತ್ತು ಬಲು ಕಷ್ಟದಾಯಕವಾದದ್ದು ಆಗಿದೆ: ಎಲ್ಲ ಸಮಯಗಳಲ್ಲಿ (ನಾವು ಪ್ರಜ್ಞಾಪೂರ್ವಕವಾಗಿ ನಿರ್ಧಿಷ್ಟ ನಿಯಮಗಳಿಗೆ ಅವಿಧೇಯರಾಗುವಾಗಲೂ ಕೂಡಾ), ಅಧಿಕಾರಿಗಳಿಗೆ *ಗೌರವವನ್ನು ಕೊಡಿರಿ.* ಪೇತ್ರ ಮತ್ತು ಇತರ ಅಪೊಸ್ತಲರು ಅಧ್ಯಾಯ 4ರಲ್ಲಿ ನ್ಯಾಯ ಮಂಡಳಿಯ ಮುಂದೆ ನಿಂತಿರುವಾಗಲೂ ಗೌರವಪೂರ್ವಕವಾಗಿ ಇದ್ದರು. ಪೇತ್ರ ಮತ್ತು ಇತರ ಅಪೊಸ್ತಲರು ಅಧ್ಯಾಯ 5ರಲ್ಲಿ ಅವರನ್ನು ಬಂಧಿಸಲು ಬಂದ ಅಧಿಕಾರಿಗಳಿಗೆ ಪ್ರತಿರೋಧವನ್ನು ಮಾಡಲಿಲ್ಲ; ಅವರು ಗೌರವಪೂರ್ಕವಾಗಿದ್ದರು. ಪೇತ್ರನು ನಮಗೂ ಕೂಡಾ "ಅರಸನನ್ನು ಗೌರವಿಸಿರಿ" ಎಂದು ಆಹ್ವಾನವನ್ನು ಕೊಡುತ್ತಾನೆ (1 ಪೇತ್ರನು 2:17)! ಇದರ ಅರ್ಥವು ಸರಕಾರದ ಜೊತೆಗಿನ ನಮ್ಮ ವ್ಯವಹಾರದ ಪ್ರತಿಯೊಂದೂ ಗಳಿಗೆಯು (ಯಾವುದೇ ನಿಯಮದಲ್ಲಿ ನಾವು ಬುದ್ಧಿಪೂರ್ವಕವಾಗಿ ವಿಧೇಯರಾಗುವದರಲ್ಲಿ *ಒಂದನ್ನು* ಹೊರತುಪಡಿಸಿ), ನಾವು ಗೌರವಪೂರಕವಾಗಿ, ಆದರಪೂರ್ವಕವಾಗಿ, ಜಾಗ್ರತೆಯಾಗಿ ಒಪ್ಪಿಸಿಕೊಳ್ಳುವಂತೆ, ಇರಬೇಕು. ನಮ್ಮ ಮನಸಾಕ್ಷಿಗೆ ವಿರೋಧವಾದ ಯಾವುದೇ ನಿಯಮಗಳಿದ್ದರೆ, ನಾವು ಇದಕ್ಕೆ ವಿಧೇಯರಾಗದೆ ಇರುವುದಕ್ಕೆ ಕಾರಣವೆಂದರೆ ನಾವು ದೇವರಿಗೆ ವಿಧೇಯರಾಗುವ ಇಚ್ಛೆಯನ್ನು ಹೊಂದಿಲ್ಲ ಎಂಬ ಪ್ರತಿಯೊಂದನ್ನು ಸ್ಪಷ್ಟಪಡಿಸಬೇಕು.

ಅಮೇರಿಕದಲ್ಲಿ, ಗರ್ಭಪಾತದ[7] ಬಗೆಗೆ ಕಹಿಯಾದ ಸಂಘರ್ಷಗಳು ಉದ್ಭವವಾದವು. ನಾನು ನನ್ನ ಹೃದಯಾಳದಿಂದ ಗರ್ಭಪಾತದ ನಿಷೇಧವು ದೇವರ ಚಿತ್ತವಾಗಿದೆ ಎಂದು ನಂಬುವವನಾಗಿದ್ದೇನೆ. ಅದೇ ಸಮಯದಲ್ಲಿ, ನಾನು "ಜೀವಿತದ ಹಕ್ಕು" ಈ ಚಳುವಳಿಯಲ್ಲಿ "ಹುಚ್ಚುತನದ ಕೃತ್ಯವನ್ನು" ಕಂಡು ದಿಗಿಲುಪಟ್ಟೆನು. ಗರ್ಭಪಾತದಲ್ಲಿ ನಿಷ್ಣಾತನಾದ ಒಬ್ಬ ವೈದ್ಯನನ್ನು ಕೊಲ್ಲುವ ಸುದ್ಧಿಯಲ್ಲಿ ಒಬ್ಬನು ಇದ್ದನು. ಇನ್ನೊಬ್ಬನು ಗರ್ಭಪಾತದ ಕ್ಲಿನಿಕ್‌ಗಳನ್ನು ಒಡೆಯುವ ಮತ್ತು ಜನರನ್ನು ಕೊಲ್ಲುವ ಪ್ರಯತ್ನದಲ್ಲಿ ಇದ್ದನು. ಈ ಜನರು ತಾವು ದೇವರ ಚಿತ್ತವನ್ನು ಮಾಡುತ್ತಿರುವದಾಗಿ ನಂಬುವವರಾಗಿದ್ದರು, ಆದರೆ ನಿಜವಾಗಿಯೂ ಅವರು ಗರ್ಭಪಾತದ ನಿರ್ಮೂಲನಾ ವಿಷಯದಲ್ಲಿ ಅವರು ತುಂಬಲಾರದ ಹಾನಿಯನ್ನು ಮಾಡಿದ್ದರು. ಅಲ್ಲಿ ಸರಿ ಮತ್ತು ತಪ್ಪುಗಳು ಗರ್ಭಪಾತವನ್ನು ನಿರ್ಮೂಲನ ಮಾಡಲು ಸರಿಯಾದ

ಮಾರ್ಗಗಳು ತಪ್ಪಾದ ಮಾರ್ಗಗಗಳು ಇವೆ;[8] ಅವರಾದರೋ ತಪ್ಪಾದ ಮಾರ್ಗವನ್ನು ಆರಿಸಿಕೊಂಡರು. ಇದರ ಪರಿಣಾಮವಾಗಿ, ಅನೇಕರ ಮನದಲ್ಲಿ, ಗರ್ಭಪಾತದ ವಿರುದ್ಧದ ನೈಜತೆಯು ಮುಟ್ಟಲಾರದ ಮಟ್ಟಕ್ಕೆ ಹೋಯಿತು.

ದೇವರನ್ನು ಅನುಸರಿಸುತ್ತೇನೆ ಎಂದು ಹೇಳಿಕೊಳ್ಳುವ ಅನೇಕರು ಅಶಿಸ್ತಿನ ಮತ್ತು ಸಂತುಷ್ಟವಿಲ್ಲದ ತತ್ವರಹಿತ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಅವರು ಅಧಿಕಾರಿಗಳ ಮೇಲೆ ಚೀಳುತ್ತಾರೆ, ಆಸ್ತಿಯನ್ನು ಹಾಳುಮಾಡುತ್ತಾರೆ, ಮತ್ತು ಬಂಡೇಳುವುದನ್ನು ಪ್ರಚೋದಿಸುತ್ತಾರೆ. ಆಗ ಸರಕಾರವು ಅವರ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಿದಾಗ ಅವರು ಹತಸಾಕ್ಷಿಗಳು ಎಂದು ಹಣೆಪಟ್ಟಿಯನ್ನು ಬರೆದುಕೊಳ್ಳುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ ಪೌಲನು ತೀತನಿಗೆ ಹೀಗೆ ಬರೆಯುತ್ತಾನೆ:

> ಅಧಿಪತಿಗಳಿಗೂ ಅಧಿಕಾರಿಗಳಿಗೂ ಅಧೀನರಾಗಿ ವಿಧೆಯರಾಗಿರಬೇಕೆಂತಲೂ ಸಕಲ ಸತ್ಕಾರ್ಯಗಳನ್ನು ಮಾಡುವುದಕ್ಕೆ ಸಿದ್ಧರಾಗಿರಬೇಕೆಂತಲೂ, ಯಾರನ್ನೂ ದೂಷಿಸದೆ ಕುತರ್ಕಮಾಡದೆ ಎಲ್ಲಾ ಮನುಷ್ಯರಿಗೆ ಪೂರ್ಣ ಸಾಧುಗುಣವನ್ನು ತೋರಿ ಸುತ್ತಾ ಸಾತ್ವಿಕರಾಗಿರಬೇಕೆಂತಲೂ ಅವರಿಗೆ ಜ್ಞಾಪಕಕೊಡು (ತೀತ 3:1, 2).

ಅಪೊಸ್ತಲರನ್ನು ಮತ್ತು ಶಕ್ತಿಶಾಲಿಯಾದ ಸನ್ಹೆದ್ರೀನಿನ ಜೊತೆಗಿನ ಅವರ ಸಂಬಂಧವನ್ನು ಪುನ ಅವಲೋಕಿಸಿರಿ. ಆಜ್ಞೆಯಾದಾಗ, ಅವರು ನ್ಯಾಯಮಂಡಲಿಯ ಸದಸ್ಯರಿಗೆ ಆಪಾದನೆ ಹೊರಿಸಲಿಲ್ಲ ಮತ್ತು ಅವರ ವಿರುದ್ಧ ಘೋಷಣೆಮಾಡುತ್ತಾ ಮೆರವಣಿಗೆ ಮಾಡಲಿಲ್ಲ,[9] ಅಥವಾ ಗುಡಿಯನ್ನು ಸುಡಲು ಪ್ರಯತ್ನಿಸಲಿಲ್ಲ. ಅವರು ಕೇವಲ ಬೋಧಿಸುವುದನ್ನು ಮುಂದುವರೆಸಿದರು ಮತ್ತು ಸಂದಿಗ್ಧತೆಯನ್ನು ಒಪ್ಪಿಕೊಳ್ಳಲು ಸಿದ್ಧರಾದರು.

ನಾವು ಚರ್ಚಿಸುತ್ತಿರುವ ತತ್ವಗಳ ಒಪ್ಪಿಸಿಕೊಳ್ಳುವಿಕೆಯ ಎಲ್ಲಾ ರಂಗಗಳಿಗೆ ಅನ್ವಯವಾಗುತ್ತವೆ ಹೊಸಒಡಂಬಡಿಕೆಯು ಅಧಿಕಾರಿಗಳಿಗೆ:[10] ಒಪ್ಪಿಸಿಕೊಳ್ಳುವಿಕೆಯ ಬಗೆಗೆ ಹೆಚ್ಚಾಗಿ ಹೇಳುತ್ತದೆ. ಹೆಂಡತಿಯು ಗಂಡಂದಿರಿಗೆ ತಮ್ಮನ್ನು ಒಪ್ಪಿಸಿಕೊಳ್ಳಬೇಕು (ಎಫೆಸ 5:22-24; ಕೊಲಸ್ಸೆ 3:18; 1 ಪೇತ್ರ 3:1-6). ಮಕ್ಕಳ ತಮ್ಮ ಪೋಷಕರಿಗೆ ಒಪ್ಪಿಸಿಕೊಳ್ಳಬೇಕು (ಎಫೆಸ 6:1-3; ಕೊಲಸ್ಸೆ 3:20). ಕೆಲಸಗಾರರು ತಮ್ಮ ಯಜಮಾನರಿಗೆ ಒಪ್ಪಿಸಿಕೊಳ್ಳಬೇಕು (ಎಫೆಸ 6:5-8; ಕೊಲಸ್ಸೆ 3:22-24).[11] ಕ್ರೈಸ್ತರಾದ ನಾವು ನಮ್ಮ ಸಭೆಯ ಹಿರಿಯರಿಗೆ ಒಪ್ಪಿಸಿಕೊಳ್ಳಬೇಕು (ಇಬ್ರಿಯ 13:17). ನಾವು ಎಲ್ಲ ಅಧಿಕಾರಿಗಳಿಗೂ ಒಪ್ಪಿಸಿಕೊಳ್ಳಬೇಕು, ನಾವು ಹಾಜರಾದ ಶಾಲೆಯ ಪ್ರಾಶುಂಪಾಲರು ಮತ್ತು ಶಿಕ್ಷಕರಿಗೆ ಅಥವಾ ನಾವು ಇರುವ ಔದ್ಯೋಗಿಕ ಸಂಸ್ಥೆಯ ಅದಿಕಾರಿಗಳಿಗೆ ವಿಧೇಯರಾಗಿಬೇಕು (ತೀತ 3:1).

ಇಲ್ಲಿ ಪಟ್ಟಿಮಾಡಿದ ಎಲ್ಲ ಸಂಬಂಧಗಳಲ್ಲಿ, ದೇವರ ವಾಕ್ಯಕ್ಕೆ ತದ್ವಿರುದ್ಧವಾದ ಸಂಗತಿಗಳನ್ನು ಮಾಡುವುದಕ್ಕೆ ಹೇಳುವ ಸಾಧ್ಯತೆಗಳು ಇವೆ. ಒಬ್ಬ ಕ್ರೈಸ್ತ ಹೆಂಡತಿಯು ಅಪವಿತ್ರವಾದ ಕೃತ್ಯಗಳಲ್ಲಿ ಪಾಲ್ಗೊಳ್ಳಲು ಅವಳ ಗಂಡನಿಂದ ಹೇಳಲ್ಪಡಬಹುದು. ಅಕ್ರೈಸ್ತ ಪೋಷಕರು, ಮಗುವು ಚರ್ಚಿನೊಂದಿಗೆ ಸಂಬಂಧ ಇರಿಸಿಕೊಳ್ಳುವುದನ್ನು ನಿಷೇಧಿಸಬಹುದು. ಯಜಮಾನನು ಅನ್ಯಾಯದ ಹಣಕಾಸಿನ ಸಂಗತಿಗಳ ಬಗೆಗೆ ಕಣ್ಣುಮುಚ್ಚಿಕೊಳ್ಳಬಹುದು. ಇಲ್ಲದಿದ್ದರೆ ನೀನು ಪರಿಣಾಮ ಎದುರಿಸಬೇಕಾಗಬಹುದು ಎಂದು ಸ್ಪಷ್ಟವಾಗಿ ಹೇಳಬಹುದು. ಇಂಥ ಸಂದರ್ಭಗಳು ಉದ್ಭವವಾದಾಗ "ನಾವು ಮಾನವನಿಗಿಂತ ದೇವರಿಗೆ ವಿಧೇಯರಾಗಿರಬೇಕು."

*ಉಳಿದ ಸಮಯಗಳಲ್ಲಿ*, ನಾವು ಕ್ರಿಸ್ತನಿಗಾಗಿ ನಮ್ಮ ನಿಲುವು ಅಪೇಕ್ಷಿತ ಪರಿಣಾಮವನ್ನು ತೋರಿಸಬೇಕಾದಲ್ಲಿ ನಾವು ಕರ್ತವ್ಯಶೀಲತೆಯ ಒಪ್ಪಿಸಿಕೊಳ್ಳುವಿಕೆಯನ್ನು ಮಾಡಬೇಕು. ಒಂದು ವೇಳೆ ಒಬ್ಬ ಕ್ರಿಸ್ತೀಯ ಹೆಡತಿಯು ತನ್ನ ಸ್ವಲ್ಪ ಲಕ್ಷ್ಯವನ್ನು ತನ್ನ ಅಕ್ರೈಸ್ತ ಗಂಡನಿಗೆ ಎಲ್ಲ ಸಮಯದಲ್ಲಿ ತೋರುವುದಾದರೆ, ಅವಳು ಈ ಕೆಗಿನ ಮಾತುಗಳನ್ನು ಹೇಳುವ ಮೂಲಕ

ತನ್ನ ಸಮರ್ಪಣಾ ಮನೋಭಾವದಿಂದ ತನ್ನ ಗಂಡನನ್ನು ಮೆಚ್ಚಿಸಲಾರಳು "ನಾನು ನಿನ್ನ ಜೊತೆಯಲ್ಲಿ ಮೀನುಹಿಡಿಯಲು ಹೋಗುವುದಕ್ಕಿಂತ ಆರಾಧನೆಗೆ ಹೋಗುತ್ತೇನೆ" ಈ ಮಾತು ಗಂಡನಿಗೆ, ಕಪಾಳ ಮೋಕ್ಷಮಾಡಿದ ಹಾಗೆ ಆಗುತ್ತದೆ. ಒಬ್ಬ ಕ್ರೈಸ್ತ ಮಗುವು ತನ್ನ ಅಕ್ರೈಸ್ತ ಪೋಷಕರಿಗೆ ಸಾಮಾನ್ಯವಾಗಿ ಗೌರವಯುತನಾಗಿ ನಡೆದುಕೊಳ್ಳುತ್ತಾನೆ, ಅಥವಾ ಅವರ ಆಕಾಂಕ್ಷೆಗಳ ವಿರುದ್ಧ ಆರಾಧನೆಯಲ್ಲಿ ಪಾಲ್ಗೊಳ್ಳುವುದು ಅವನ ಬಂಡೇಳುವ ಸ್ವಭಾವದ ಅಭಿವ್ಯಕ್ತಿಯಾಗಿದೆ. ಹಿಗೆಯೇ ಒಡೆಯನ ಜೊತೆಗೂ ಸಹ, ಸಭೆಯ ಸದಸ್ಯರು, ಶಾಲೆಯ ವಿಧ್ಯಾರ್ಥಿಗಳು, ಔದ್ಯೋಗಿಕ ಸಂಸ್ಥೆಗಳ ಜೊತೆಗೂ ಆಗಿದೆ.

ಒಂದು ವೇಳೆ ನಾವು ದೇವರಿಂದ ಗುಣಾತ್ಮಕ ಪ್ರಭಾವವನ್ನು ದೇವರಿಗೋಸ್ಕರ ಬೀರಬೇಕಾದಲ್ಲಿ ನಾವು ಪ್ರತಿಯೊಂದರಲ್ಲಿ ಮಧುರವಾಗಿ ಒಪ್ಪಿಸಿಕೊಳ್ಳುವುದನ್ನು ಕಲಿತುಕೊಳ್ಳಬೇಕು. ಆದರೆ ಇದರ ಹೊರತಾಗಿ ಪ್ರಕಟಪಡಿಸಲ್ಪಟ್ಟ ದೇವರ ಚಿತ್ತಕ್ಕೆ ಒಂದು ವೇಳೆ ವಿರುದ್ಧವಾದಲ್ಲಿ ಇದನ್ನು ಮಾಡಕೂಡದು!

## ಮುಕ್ತಾಯ

ನಾನು ಮುಕ್ತಾಯಗೊಳಿಸುತ್ತಿರುವಂತೆ, ನಾನು ಈ ಅಧ್ಯಯನದ ಹೃದಯಭಾಗವಾದ 5:29ರಲ್ಲಿ ಪೇತ್ರನು ಮತ್ತು ಇತರರು ಹೇಳಿದ ಮಾತುಗಳಾದ: "ನಾವು ವಿಧೇಯರಾಗುವದು ಮನುಷ್ಯರಿಗಲ್ಲ ದೇವರಿಗೆ" ಎಂಬ ಮಾತಿನೆಡೆಗೆ ನಾನು ತಿರುಗಲು ಇಚ್ಚಿಸುತ್ತೇನೆ.

ಸಭೆಯ ಮೊದಲ ದಿನಗಳಲ್ಲಿ, ಕೆಲ ಸದಸ್ಯರು ನಾಯಕನಾದ ತೆರ್ತುಲ್ಯನ ಮೇಲೆ ಕ್ರೈಸ್ತರ ಮೇಲಿನಂತೆ ಅವರಿಗೂ ಒತ್ತಡ ಹಾಕಲಾಗುತ್ತಿದೆ ಎಂದು ಆತನ ಬಗೆಗೆ ಆರೋಪಮಾಡುತ್ತಿದ್ದರು. "ಒಂದು ವೇಳೆ ನಾವು ಅಧಿಕಾರಗಳ ಜೊತೆ ಹೋಗದಿದ್ದರೆ" ಅವರು "ನಾನು ನಮ್ಮ ಜೀವವನ್ನು ಕಳೆದುಕೊಳ್ಳುವುದಕ್ಕಿಂತ ನಮ್ಮ ಕೆಲಸವನ್ನು ಕಳೆದುಕೊಳ್ಳುತ್ತೇವೆ ಕೊನೆಯಲ್ಲಿ ನಾವು ನಮ್ಮ ಜೀವವನ್ನು ಕಳೆದುಕೊಳ್ಳುತ್ತೇವೆ" ಎಂದು ಹೇಳಿದರು. ದೇವರು ಖಂಡಿತವಾಗಿ ನಮಗಾಗಿ ಅಂಥ ಸ್ಥಿತಿಯನ್ನು ಆಶಿಸುವುದಿಲ್ಲ. ಹೇಗೋ ನಮ್ಮ ಕುಟುಂಬಗಳು ಜೀವಿಸಬೇಕು. ತೆರ್ತುಲ್ಯನು ಅವರೆಡೆಗೆ ಒಂದು ಕ್ಷಣ ನೋಡಿದನು ಮತ್ತು ಕೇಳಿದನು "ನಾವು ಜೀವಿಸಲೇಬೇಕೋ?"

ನಾವು ಹೆಚ್ಚಾಗಿ ಆಗಲೇಬೇಕು ಎಂಬುವವುಗಳನ್ನು ನಮ್ಮ ಜೀವಿತದಲ್ಲಿ ಪರಿಚಯಿಸಿದ್ದೇವೆ. ನಾವು ಕೆಲ ನಿಶ್ಚಿತವಾದ ಆಸ್ತಿಗಳನ್ನು ಹೊಂದಿರಬೇಕು ನಾವು ಗಳಿಸಿರಬೇಕು, ನಾವು ಜಯಶಾಲಿಗಳಾಗಬೇಕು ನಾವು ಸಂತಸದಿಂದಿರಬೇಕು, ಮತ್ತು ಮುಂತಾದವು. ನಿಜವಾಗಿಯೂ, ನಮ್ಮ ಜೀವಿತದಲ್ಲಿ ಕೆಲ ಮಾಡಲೇಬೇಕಾದ ಎನ್ನುವ ಸಂಗತಿಗಳು ಉಂಟು ಆದರಲ್ಲಿಗಿದೂ, ಒಂದು "ನಾವು ದೇವರಿಗೆ *ವಿಧೇಯರಾಗ*ಬೇಕು."


---

ಟಿಪ್ಪಣೆಗಳು

[1]ವಿಮೋಚನಕಾಂಡ 20:13. ಇದು ಮಾತ್ರನಿಜ, ಕೊಲೆಯು ದೇವರ ಚಿತ್ತವನ್ನು ಹತ್ತು ಆಜ್ಞೆಗಳು ಕೊಡಲ್ಪಡುವುದಕ್ಕಿಂತ ಮೊದಲೇ ಅದು ಉಲ್ಲಂಘನೆ ಮಾಡಿತ್ತು (ಆದಿಕಾಂಡ 4:8-15). [2]ತತ್ವವು ಯಾವುದೆಂದರೆ "ಎಲ್ಲ ಸಂಗತಿಗಳು ಎಲ್ಲ ಮನುಷ್ಯರಿಗೆ ಬಂದದ್ದಾದರೆ ನಾವು ರಕ್ಷಿಸಲ್ಪಡುವುದಿಲ್ಲ" (ಗಮನಿಸಿ 1 ಕೊರಿಂಥ 9:22). ಉದಾಹರಣೆಗಾಗಿ, ಸ್ಪಾನಿಷ್‌ನ್ನು ಮಾತನಾಡುವವರು ಹೈಸ್ಪಾನಿಕ ಎಂದು ಕರೆಯಲು ಆಶಿಸುತ್ತಾರೆ, ನಾವು ಆ ಪರಿಭಾಷೆಯನ್ನು ಬಳಸಬೇಕು. [3]ಇದರ ಮೇಲೆ ನಿರಂತರ ಬೋಧನೆ ಮಾಡುವದು ನಮ್ಮ ಅಭ್ಯಾಸವಾಗಬಾರದು. ನಾವು ಲೈಂಗಿಕ ಪಾಪದ ಬಗೆಗೆ ಬೋಧಿಸುವಾಗ ಸಲಿಂಗಕಾಮವನ್ನು ಕೂಡಿಸಿಕೊಳ್ಳುವುದನ್ನು ನಾವು ಅಸಹ್ಯಿಸಬಾರದು ಎಂಬುದಾಗಿ ನಾನು ಅರ್ಥೈಸಿಕೊಳ್ಳುತ್ತೇನೆ. [4]ಈ ಪುಸ್ತಕದಲ್ಲಿ ಒಂದು ಕಡೆ ಸಿಕ್ಕುವ "ಮನಸಾಕ್ಷಿ" ಎಂಬ ಪುರವಣಿ ಲೇಖನವನ್ನು ನೋಡಿರಿ. [5]ರೋಮಾಪುರ 14ಸಹ ಇಂಥ ನ್ಯಾಯತೀರ್ಪಿನ ವಿಷಯಗಳಲ್ಲಿ ಸ್ಪಷ್ಟವಾಗಿಸುತ್ತವೆ,

ನಮ್ಮನ್ನು ಸೇರದ ನಮ್ಮ ಸಹೋದರನನ್ನು ನಾವು ನಿಂದಿಸಬಾರದು. ಇವು ನ್ಯಾಯತೀರ್ಪಿನ ವಿಷಯಗಳು ಆಗಿ ವೆಯೇ ಹೊರತು ನಂಬಿಕೆ ಸಂಗತಿಗಳಲ್ಲ (ಉದಾಹರಣೆಗೆ ದೇವರು ತನ್ನ ಚಿತ್ತವನ್ನು ಸ್ಪಷ್ಟವಾಗಿ ಪ್ರಕಟಿಸಿದ ಸಂಗತಿಗಳಾಗಿವೆ). [6]ಯುದ್ಧಕ್ಕೆ ಹೋಗುವದು ಇದಕ್ಕೊಂದು ಉದಾಹರಣೆ ಆಗಿದೆ. ಕೆಲ ಕ್ರೈಸ್ತರು "ಪ್ರಜ್ಞಾಪೂರ್ವಕ ವಿರೋಧಿಗಳಾಗಿರುತ್ತಾರೆ"; ಇವರಲ್ಲಿ ಕೆಲವರು ಅಮೇರಿಕದಲ್ಲಿ ಮತ್ತು ಇದೇ ತರದಲ್ಲಿ ಆಳಲ್ಪಡುವ ದೇಶಗಳಲ್ಲಿ ನಿಯಮವು ಯಾರೊಬ್ಬನೂ ತನ್ನ ಆತ್ಮಸಾಕ್ಷಿಯನ್ನು ಉಲಂಘಿಸಲು ಒತ್ತಾಯಿಸಬಾರದು ಎಂದು ಹೇಳುತ್ತದೆ. ನಿಯಮಗಳ ರಕ್ಷಣೆಯ ಬಗೆಗೆ ವಾಗ್ದಾನವನ್ನು ಮಾಡಿದ್ದಾಗ್ಯೂ, ಹೇಗೋ, ಅಲ್ಲಿ ಇನ್ನೂ ಸರಕಾರಕ್ಕೆ ಒಪ್ಪಿಸುವುದನ್ನು ನಿರಾಕರಿಸಿದಾಗ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. [7]ಒಂದು ವೇಳೆ ನೀವು ಸಮುದ್ದಾದ ಇರುವುದಾದರೆ, ನಿಮಗೆ ಅನ್ವಯಿಸುವ ಉದಾಹರಣೆಯನ್ನು ಕೊಡಿರಿ ನಿಮ್ಮ ದೇಶವು ಖಂಡಿತಾವಾಗಿ ಕೆಲ ಯೋಗ್ಯ ಚಳುವಳಿಗಳ "ಹುಚ್ಚತನದ ಕೃತ್ಯದಿಂದ" ಇದು ಜರ್ಜರಿತವಾಗಿವೆ. [8]ಶಿಕ್ಷಣ, ಶಾಸನ, ಆಯ್ಕೆಗಳ ಕೊಡುಗೆಗಳು ಸಾಧ್ಯವಾದ ಮಾರ್ಗಗಳಾಗಿವೆ. [9]ಪ್ರದರ್ಶನಮಾಡುವುದರಲ್ಲಿನ ಸಮಸ್ಯೆಯ ಪ್ರಾಮುಖ್ಯತೆಗಿಂತಲೂ ಧರ್ಮಶಾಸ್ತ್ರಗಳ ಆಧಾರಿತವಲ್ಲದವುಗಳಷ್ಟು ಕೆಟ್ಟದ್ದೇನಲ್ಲ. ಒಂದು ವೇಳೆ ಪ್ರದರ್ಶನವು ನ್ಯಾಯಬದ್ಧವೂ ಮತ್ತು ನಾಗರಿಕತೆ ಮಿತಿಯಲ್ಲಿ ಇದ್ದದ್ದೂ ಆಗಿದ್ದಾದರೆ, ಕ್ರೈಸ್ತನು ಅದರಲ್ಲಿ ಪಾಲ್ಗೊಳ್ಳಬಹುದಾಗಿದೆ. ಅಪೊಸ್ತಲರು, ಇದರಂತೇನೂ ಮಾಡಲಿಲ್ಲ. ಪ್ರತ್ಯಕ್ಷವಾಗಿ, ಅವರು ಆತ್ಮಗಳ ರಕ್ಷಣೆಯು ಅಧಿಕಾರಿಗಳ ಮೇಲೆ ಒತ್ತಡ ಹಾಕುವುದಕ್ಕಿಂತ ಹೆಚ್ಚಾಗಿ ಮಹತ್ವದ್ದಾಗಿದೆ ಎಂದು ಅವರು ಯೋಚಿಸುವವರಾಗಿದ್ದರು. ಪರಲೋಕಕ್ಕೆ ಹೋಗುವ ಜನರು ಕೆಟ್ಟ ನಾಯಕತ್ವದ ದೇಶದಲ್ಲಿ ಇದ್ದುಕೊಂಡು ಪರಲೋಕಕ್ಕೆ ಹೋಗಲು ಸಾಧ್ಯ; ಆದರೆ ಅವರು ಕ್ರಿಸ್ತನಿಲ್ಲದೆ ಪರಲೋಕಕ್ಕೆ ಹೋಗಲಾರರು. [10]ಒಪ್ಪಿಸಿಕೊಳ್ಳುವಿಕೆಯ ಮೇಲಿನ ಸತ್ಯವೇದದ ಬೋಧನೆಯು ಅಧಿಕಾರಕ್ಕೆ ಒಪ್ಪಿಸಿಕೊಳುವಿಕೆಗಿಂತ ಹೆಚ್ಚು ವಿಶಾಲವಾಗಿದೆ (ಗಮನಿಸಿ ಎಫೆಸ 5:21), ಆದರೆ ನಾವು ಈಗ ಪರಿಗಣಿಸುತ್ತಿರುವ ವಿಷಯವು ನಾವು ಅಧಿಕಾರಕ್ಕೆ ಒಪ್ಪಿಸಿಕೊಡುವುದು ಆಗಿದೆ.

[11]ಈ ಪರಿಚ್ಛೇದಗಳು ನಿರ್ದಿಷ್ಟವಾಗಿ ಗುಲಾಮರು ತಮ್ಮನ್ನು ಒಡೆಯರಿಗೆ ಒಪ್ಪಿಸಿಕೊಳ್ಳುವುದನ್ನು ಸೂಚಿಸುವವುಗಳಾಗಿವೆ, ಆದರೆ ಸಾಮಾನ್ಯ ಅನ್ವಯದಲ್ಲಿ ಒಡೆಯ ಮತ್ತು ನೌಕರ ಸಂಬಂಧ ವಾಗಿರುತ್ತದೆ.




*ಯೆರುಸಲೇಮಿನ ಭೂ ಪಟ*

# ಪದಗಳ ಪಟ್ಟಿ: ಭಾಗ ಎರಡು

**ಅಪೊಸ್ತಲರ** (***apostolos***) - "ಅಪೊಸ್ತಲ" ಇದು ಗ್ರೀಕನಿಂದ ಭಾಷಾಂತರಿಸಲ್ಪಟ್ಟ ಪದವಾಗಿದೆ. ಎರಡು ಪದಗಳ ಸೇರ್ಪಡೆಯಾಗಿದೆ: ಅಪೋ, ಗ್ರೀಕ ಪದ ಅಂದರೆ "ಇಂದ," ಮತ್ತು ಸ್ಟೆಲೊ, (*stello*), ಅಂದರೆ "... ಇಂದ ಕಳುಹಿಸಲ್ಪಟ್ಟವನು." ಅಂದರೆ ಸಂದೇಶಕನು. ಸತ್ಯವೇದದ ಅನೇಕ ಪದಗಳಂತೆ, "ಅಪೊಸ್ತಲ" (*apostolos*) ಎನ್ನುವ ಪದವು ಒಂದು ವಿಶೇಷ ರೀತಿಯಲ್ಲಿ ಅಥವಾ ಸಾಮಾನ್ಯವಾಗಿ ಉಪಯೋಗಿಸಬಹುದು. ಅದು ಯೇಸುವಿನಿಂದ ಕಳುಹಿಸಲ್ಪಟ್ಟ ಹನ್ನೆರಡು ಜನರು (ಮತ್ತು ಪೌಲ) ಇವರನ್ನು ಕುರಿತಾಗಿರಬಹುದು. ಅಥವಾ ಯಾರಾದರೂ "ಕಳುಹಿಸಲ್ಪಟ್ಟವರು" ಎಂದು ಸೂಚಿಸಬಹುದು. ಅಪೊಸ್ತಲರ ಕೃತ್ಯದಲ್ಲಿ, ಲೂಕನು ಈ ಪದವನ್ನು ವಿಶೇಷವಾಗಿ ಹನ್ನೆರಡು ಸೂಚಿಸುವದಕ್ಕೆ ಉಪಯೋಗಿಸಿದನು. ಆಗಾಗ್ಗೆ, ಲೂಕನು ಸಾಮಾನ್ಯ ರೀತಿಯಲ್ಲಿ ಉಪಯೋಗಿಸಿದ್ದಾನೆ. ಉದಾಹರಣೆಗೆ, ಅಪೊಸ್ತಲರ ಕೃತ್ಯಗಳು 14:14ರಲ್ಲಿ ಬಾರ್ನಬನು ಅಪೊಸ್ತಲನೆಂದು ಕರೆಯಲ್ಪಟ್ಟಿದ್ದಾನೆ. ಅವನು ಸಿರಿಯದ ಅಂತಿಯೋಕ್ಯ ಸಭೆಯಿಂದ ಕಳುಹಿಸಲ್ಪಟ್ಟವನು (ಅಪೊಸ್ತಲರ ಕೃತ್ಯಗಳು 13:1-3). ಅಪೊಸ್ತಲರ ಇತರ ಉದಾಹರಣೆಗಳಿಗಾಗಿ ರೋಮ 16:7; 2 ಕೊರಿಂಥ 8:23; ಫಿಲಿಪ್ಪಿಯವರಿಗೆ 2:25 ನೋಡಿರಿ. ("ಅಪೊಸ್ತಲರ" ಎಂದು ಕೆಲವು ಕಡೆಗಳಲ್ಲಿ ಮತ್ತು "ಸಂದೇಶಕ" ಎಂದು ಕೆಲವು ಕಡೆಗಳಲ್ಲಿ ಭಾಷಾಂತರಿಸಲಾಗಿದೆ). ಸಭೆಯಿಂದ ಕಳುಹಿಸಲ್ಪಟ್ಟವರನ್ನು ಕುರಿತು ಇಂದು ಲಾಟಿನ್ ಪದ "ಸುವಾರ್ತಾ ಸೇವಕ, ಮಿಶನರಿ" ಎಂದು ಉಪಯೋಗಿಸುತ್ತೇವೆ. "ಮಿಶನರಿ" ಇದು "ಅಪೊಸ್ತಲ" ಎನ್ನುವದಕ್ಕೆ ಸಮನಾದ ಪದವಾಗಿದೆ.

**ಕ್ರಿಸ್ತ** (***Christos***) - "ಕ್ರೈಸ್ಟ" ಇದು "ಮೆಸ್ಸಿಯ" ಎನ್ನುವ ಇಬ್ರಿಯ ಪದದ ಗ್ರೀಕ ಭಾಷಾಂತರ. ಎರಡೂ "ಅಭಿಶಿಕ್ತನು" ಎನ್ನುವ ಅರ್ಥ ಕೊಡುತ್ತದೆ. ಹಳೆ ಒಡಂಬಡಿಕೆಯಲ್ಲಿ, ಯಾಜಕರು, ಪ್ರವಾದಿಗಳು ಮತ್ತು ಅರಸರು ಅಭಿಷೇಕಿಸಲ್ಪಟ್ಟರು, ಆದುದರಿಂದ ಈ ಪದವು ಇವರಲ್ಲಿ ಯಾರನ್ನಾದರೂ ಸೂಚಿಸುತ್ತದೆ. ಮಹಾ ಯಾಜಕನನ್ನು "ಅಭಿಷಿಕ್ತನು" ಎಂದು ಕರೆಯಲಾಯಿತು (ಯಾಜಕಕಾಂಡ 4:3). ಪ್ರವಾದಿಗಳನ್ನು "ಅಭಿಷಿಕ್ತನು" ಎಂದು ಕರೆಯಲಾಯಿತು (ಕೀರ್ತನೆ 105:15). ಇಸ್ರಾಯೇಲಿನ ಅರಸನಿಗೆ ಈ ಪದವು ವಿಶೇಷ ವಾಗಿ ಅನ್ವಯಿಸುತ್ತದೆ (ಕೀರ್ತನೆ 2:2; 18:50). ದಾವೀದನು ಸೌಲನನ್ನು ಕೊಲ್ಲುವದಕ್ಕೆ ಹಿಂಜರಿದನು ಯಾಕೆಂದರೆ ಅವನು "ಯೆಹೋವನ ಅಭಿಷಿಕ್ತನು" (1 ಸಮುವೇಲ 24:6; 26:9; ಹೋಲಿಸು. 2 ಸಮುವೇಲ 1:14). ಯೆಹೂದ್ಯರು "ಮೆಸ್ಸಿಯನಿಗಾಗಿ" ಹುಡುಕಿದರು. ಆತನು ಅರಸನಾದ ದಾವೀದನ ಸಂತತಿಯವರು ಮತ್ತು ಹಿಂದಿನ ಮಹಿಮೆಯನ್ನು ಪುನಃ ಸ್ಥಾಪಿಸುವವನು. ಯೇಸುವೇ ಬಹು ಕಾಲದಿಂದ ಕಾಯುತ್ತಿದ್ದ ಮೆಸ್ಸಿಯನು, ಅಥವಾ ಕ್ರಿಸ್ತನು (ಮತ್ತಾಯ 16:17; ಮಾರ್ಕ 14:61, 62; ಯೋಹಾನ 4:26). ಯೇಸುವು ಯಾಜಕನು (ಇಬ್ರಿಯ 4:14), ಪ್ರವಾದಿಯು (ಹೋಲಿಸು. ಅಪೊಸ್ತಲರ ಕೃತ್ಯಗಳು 3:22), ಮತ್ತು ಅರಸನು (1 ತಿಮೊಥೆ 6:15) ಆಗಿದ್ದುದರಿಂದ, "ಅಭಿಷಿಕ್ತನು" ಎಂಬ ಪದವು ಈ ಎಲ್ಲ ಪಾತ್ರಗಳಿಗೆ ಆತನನ್ನು ಕುರಿತು ಅನ್ವಯವಾಗುತ್ತದೆ. ಯೆಹೂದ್ಯರು "ಮೆಸ್ಸಿಯ/ಕ್ರಿಸ್ತ" ಎಂಬ ಪದವನ್ನು ಕೇಳಿದಾಗ, ಅವರು ಒಬ್ಬ ಅರಸನ ಕುರಿತು ಆಲೋಚಿಸಿದರು. ನಾವು ಯೇಸುವನ್ನು ಕುರಿತು "ಕ್ರಿಸ್ತನು" ಎಂದು ಮಾತಾಡುವಾಗ, ನಾವು ಆತನನ್ನು ಅರಸನೆಂದು ಸಾರುತ್ತೇವೆ.

**ದೀಕ್ಷಾಸ್ನಾನ** (***baptisma or baptismos***) - "ದೀಕ್ಷಾಸ್ನಾನ" ಇದು ಗ್ರೀಕ್ ಪದವಾಗಿದೆ. ಬಾಪ್ಟಿಸ್ಮಾ *baptisma* ಅಂದರೆ "ಮುಳುಗಿಸುವದು." ಮತ್ತು ಬಾಪ್ಟಿಸ್‌ಮಸ್ *baptismos* ಅಂದರೆ "ಮುಳುಗಿಸುವ ಕಾರ್ಯ" - ಹೆಚ್ಚು ಮಹತ್ವ ಕೊಡಲಾಗದಷ್ಟು ಅಲ್ಪ ವ್ಯತ್ಯಾಸವಿದೆ.

ಇದರ ಕ್ರೀಯಾ ಪದವು ಬಾಪ್ಟಿಸೊ (ಇದನ್ನು "ಬಾಪ್ಟಿಡ್ಸೊ" *baptizo* ಎಂದು ಉಚ್ಚರಿಸಬಹುದು). ಅಂದರೆ "ಮುಳುಗಿಸುವದು." ಪರಿಚ್ಛೇದದ ಹಿನ್ನೆಲೆಯಲ್ಲಿ ಮುಳುಗಿಸುವಿಕೆಯು ನಿರ್ಧರಿಸಲ್ಪಡುತ್ತದೆ. ಇದನ್ನು ನಾವು ಅಲಂಕಾರದ ರೂಪದಲ್ಲಿ ಉಪಯೋಗಿಸುವದಾದರೆ, ಅದು ಬಹು ಉದ್ವೇಗ ಗೊಳ್ಳುವದನ್ನು ಸೂಚಿಸುತ್ತದೆ. (ಉದಾಹರಣೆಗೆ., ಯೇಸುವಿನ ಬಾಧೆಗಳ ದೀಕ್ಷಾಸ್ನಾನ ಮಾರ್ಕ 10:38, 39).

**ನರಕ (*geenna*)** - ಮೂರು ವಿವಿಧ ಪದಗಳನ್ನು "ನರಕ" ಎಂದು ಭಾಶಾಂತರಿಸುತ್ತದೆ: (1) "Gehenna" (*geenna*) ಇದು ದುಷ್ಟರ ನಿತ್ಯದ ಸ್ಥಳವನ್ನು ಸೂಚಿಸುತ್ತದೆ (ನಾವು ಸಾಮಾನ್ಯ ವಾಗಿ ಆಲೋಚಿಸುವ "ನರಕ"). (2) "Tartarus" (*tartaroo*) ಇದು ಶಾಸ್ತ್ರಗಳಲ್ಲಿ ಒಂದೇ ಬಾರಿ ಕಾಣಿಸಿಕೊಂಡಿದೆ (2 ಪೇತ್ರ 2:4). ಇದು ದುಷ್ಟ ದೇವದೂತರು ತಮ್ಮ ನ್ಯಾಯದಂಡನೆಯನ್ನು ಕಾಯುವಾಗ ಇಡಲ್ಪಟ್ಟ ಸ್ಥಳ. (3) "Hades" (*hades*) ("ಹೇಡಿಸ್" ನೋಡಿರಿ).

**ಪಶ್ಚಾತಾಪ (*metanoeo*)** - "ಪಶ್ಚಾತಾಪ" ಇದು ಗ್ರೀಕ ಪದದಿಂದ ಭಾಷಾಂತರ ಹೊಂದಿದೆ. "ನಂತರ" (*meta*) ಎನ್ನುವ ಪದವು "ಆಲೋಚನೆ" ಎನ್ನುವ ಪದಕ್ಕೆ (*noema*) ಜೋಡಣೆಯಾಗಿದೆ. ಅದರ ಸರಳ ಅರ್ಥ "ನಂತರದ ಯೋಚನೆ." ನಮ್ಮ ಅಲೋಚನೆ ಬದಲಾಯಿಸುವದು ಎಂದರ್ಥ. (ಮಾನಸಾಂತರ ಮನಸ್ಸಿನಲ್ಲಿ ನಡೆಯುತ್ತದೆ. ಕೆಥೋಲಿಕ್ ಬೈಬಲ್ಲಿನಲ್ಲಿ ಮೆಟನೋಯೊ ಪದವನ್ನು "ತಪಸ್ಸು ಮಾಡು" ಎಂದು ಅನುಮದಿಸಲ್ಪಟ್ಟದ್ದು ಇದರ ಜೊತೆ ಹೊಂದುವದಿಲ್ಲ) ಮಾನ್‌ಸಾಂತರ ಅಂದರೆ "ಮನಸ್ಸಿನ ಬದಲಾವಣೆ" (ಮತ್ತಾಯ 21:29; ಇಬ್ರಿಯ 12:17 ಅನುವಾದ ನೋಡಿ) ಮತ್ತು ಆ ಅರ್ಥದಲ್ಲಿ ದೇವರಿಗೆ ಹೋಲಿಸಬಹುದು (ಆದಿಕಾಂಡ 6:6 KJV). ಆದರೆ ಮನುಷ್ಯನಿಗೆ ಹೋಲಿಸಿದಾಗ, ಮನಸಾಂತರ ಅಂದರೆ "ಪಾಪದ ಬಗ್ಗೆ ಮನಸ್ಸನ್ನು ಬದಲಾಯಿಸುವದು ಅಥವಾ ನಿರ್ದಿಷ್ಟ ವಾದ ಪಾಪ ಮಾಡುವದನ್ನು ನಿಲ್ಲಿಸುವದು." ಮನಸಾಂತರವು ದೈವೀಕ ದುಖದ ಪರಿಣಾಮ. (2 ಕೊರಿಂಥ 7:10ಡ "ದೇವರ ಚಿತ್ತಾನುಸಾರವಾದ ದುಖ" KJV - "ದೈವೀಕ ದುಖದ" ಅದನ್ನು "ಲೋಕದ ದುಃಖಿ"ದ ಜೊತೆಗೆ ಹೋಲಿಸಲಾಗಿದೆ - ಇದು ಪಾಪದಿಂದಾದ ಪರಿಣಾಮಕ್ಕೋಸ್ಕರ ದುಃಖಿಸುವದು.) ಮಾನಸಾಂತರವು ಪರಿವರ್ತಿತ ಜೀವನದಲ್ಲಿ ಪರಿಣಮೀಸುತ್ತದೆ (ಅಪೊಸ್ತಲರ ಕೃತ್ಯಗಳು 26:20). ಮಾನಸಾಂತರ ಹಾಗೂ ಜೀವನದಲ್ಲಿ ಬದಲಾವಣೆ ಇವುಗಳಲ್ಲಿರುವ ವ್ಯತ್ಯಾಸವು ಮುಖ್ಯವಾದದ್ದು. ಪಂಚಾಶತ್ತಮ ದಿನ 3000 ಜನರು ಅದೇ ದಿನದಂದು ಮಾನಸಾಂತರಪಡಲು ಸಿದ್ಧರಾದರು (ಅಪೊಸ್ತಲರ ಕೃತ್ಯಗಳು 2:38, 41) ಆದರೆ ಆ ತೀರ್ಮಾನವನ್ನು ಜೀವನದಲ್ಲಿ ಅಳವಡಿಸಲು (ಅಂದರೆ ಜೀವನಗಳನ್ನು ಬದಲಾಯಿಸಲು) ಅನೇಕ ದಿನಗಳು ಬೇಕು.

**ಪಶ್ಚಾತಾಪ** - "ಪಶ್ಚಾತಾಪ ನೋಡಿರಿ"

**ಪ್ರವಾದನೆ** - "ಪ್ರವಾದಿ" ನೋಡಿರಿ.

**ಪ್ರವಾದಿ (*prophetes*)** - ನಾವು ಸಾಮಾನ್ಯವಾಗಿ ಪ್ರವಾದಿ ಅಂದರೆ ಭವಿಷ್ಯದಲ್ಲಿ ಆಗುವದನ್ನು ಮುಂತಿಳಿಸುವವನು ಎಂದು ಆಲೋಚಿಸುತ್ತೇವೆ. ಹಳೆ ಒಡಂಬಡಿಕೆಯಲ್ಲಿ ಪ್ರವಾದಿಗಳ ಬಹು ಪ್ರಾಮುಖ್ಯ ಕೆಲಸವಾಗಿತ್ತು. "ಪ್ರವಾದಿ" ಎಂಬ ಪದವು "ದೇವರ ಪರವಾಗಿ ಮಾತಾಡುವವನು" ಎಂದು ಸೂಚಿಸುತ್ತದೆ. ಕರ್ತನ ಸಂದೇಶವನ್ನು ಭವಿಷ್ಯದಲ್ಲಿ ಆಗುವದನ್ನು ಹೇಳುವದರ ಮೂಲಕ ಒಬ್ಬ ಪ್ರವಾದಿ ತಿಳಿಸುತ್ತಿದ್ದನು. ತನ್ನ ದಿನಗಳ ಜನರಿಗೋಸ್ಕರ ಪ್ರವಾದಿಯ ಸಂದೇಶ ಭಾರವಾಗಿರುತ್ತಿತ್ತು. ಪ್ರವಾದಿಯು ಒಬ್ಬ ಪ್ರೇರೇಪಿಸಲ್ಪಟ್ಟ ಪ್ರಸಂಗಿ ಎಂದು ಕರೆಯಬಹುದು. ಕೆಲವೊಮ್ಮೆ "ಪ್ರವಾದಿಯು" ಒಬ್ಬ "ಭವಿಷ್ಯ" ಹೇಳುವವನಾಗುತ್ತಿದ್ದನು. ಆದರೆ ಅವನು ಯಾವಾಗಲೂ "ದೇವರ ಮಾತನ್ನು ನೇರವಾಗಿ ತಿಳಿಸುವವನಾಗಿರುತ್ತಿದ್ದನು."

**ಮತಾಂತರ (*proselutos*)** - "ಮತಾಂತರ" ಇದು ಗ್ರೀಕ ಪದ *proserchomai*ಕ್ಕೆ

ಸಂಬಂಧಿಸಿದ್ದಾಗಿದೆ. ಇದರಲ್ಲಿ pros ಕಡೆಗೆ ಮತ್ತು *erchomai* (ಬರುವದು) ಎರಡನ್ನೂ ಜೋಡಿಸಿದೆ. ಹೊಸ ಒಡಂಬಡಿಕೆಯಲ್ಲಿ ಅದು, ಅನ್ಯರು ಯೆಹೂದ್ಯ ಧರ್ಮವನ್ನು ಸ್ವೀಕರಿಸುವದಕ್ಕೆ ಬಂದದ್ದನ್ನು ಸೂಚಿಸುತ್ತದೆ. ಒಬ್ಬ ಮತಾಂತರ ಹೊಂದುವದಕ್ಕೆ ಮೂರು ಪದ್ಧತಿಗಳಿದ್ದವು: (1) ಗಂಡಸರ ಸುನ್ನತಿ (2) ಸ್ವ ದೀಕ್ಷಾಸ್ನಾನ ಸಾಕ್ಷಿಗಳ ಎದುರು (ಮುಳುಗಿ) (3) ಯಜ್ಞ ಸಮರ್ಪಣೆ (ಆಲಯವು ಎಷ್ಟು ಕಾಲ ನಿಲ್ಲುತ್ತದೋ ಅಷ್ಟು ಕಾಲ). ಸುನ್ನತಿಯ ಕಾರಣದಿಂದ ಹೆಚ್ಚು ಜನ ಸ್ತ್ರೀಯರು ಮತಾಂತರ ಹೊಂದಿದರು. ಅನೇಕ ಅನ್ಯರು "ದೇವ ಭಯವುಳ್ಳವರಾಗಿರುವದಕ್ಕೆ" ಮನಸ್ಸು ಮಾಡಿದರು - ಅವರಲ್ಲಿ ಅನ್ಯರು ನಿಜ ದೇವರನ್ನು ನಂಬಿ ಆಲಯದಲ್ಲಿ ಆರಾಧನೆಯಲ್ಲಿ ಭಾಗವಹಿಸಿದರು ಆದರೆ ಅವರು ಮತಾಂತರ ಹೊಂದಲಿಲ್ಲ.

**ಪ್ರಿಮಿಲ್ಲೆನಿಯಾಲಿಸಮ್** - "Premillenialism" ಇದು ಒಂದು ಲಾಟಿನ ಪದವಾಗಿದೆ. ಇದು "pre" (ಮೊದಲ) ಮತ್ತು "millennium" (ಅಂದರೆ ಸಾವಿರ ವರ್ಷಗಳು). ಇದರ ಸಮಯ ಯೇಸುವಿನ ಎರಡನೆಯ ಬರೋಣವನ್ನು ಸೂಚಿಸುತ್ತದೆ. ಪ್ರಿಮಿಲ್ಲೆನಿಯಸ್ಟಗಳು, ಪ್ರಕಟನೆ 20ರಲ್ಲಿನ ಸಾವಿರ ವರ್ಷಗಳ ಮೊದಲು ಕ್ರಿಸ್ತನ ಬರುವಿಕೆಯನ್ನು ನಂಬುತ್ತಾರೆ. (ಪೋಸ್ಟ ಮಿಲ್ಲೆನಿಯಸ್ಟಗಳು ಕ್ರಿಸ್ತನು ಸಾವಿರ ವರ್ಷದ ಆಳ್ವಿಕೆಯ ತರುವಾಯ ಬರುತ್ತಾನೆಂದು ನಂಬುತ್ತಾರೆ.) ಪ್ರಿಮಿಲ್ಲೆನಿಯಾಲಿಸಮ್, ಹೇಗೂ, ಕ್ರಿಸ್ತನ ಬರೋಣಕ್ಕಿಂತ ಹೆಚ್ಚು ಒಂದು ಸಂಕೀರ್ಣ ತತ್ವವನ್ನು ಸ್ವೀಕರಿಸುತ್ತದೆ. ಇದು ಕ್ರಿಸ್ತನು ಬಹು ಬೇಗನೆ ಬರುತ್ತಾನೆಂದು ಬೋಧಿಸುತ್ತದೆ ಮತ್ತು ಯೆರೂಸಲೇಮಿನಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುತ್ತಾನೆ (ಪ್ರಿಮಿಲ್ಲೆನಿಯಲಿಸ್ಟಗಳು ಸಭೆ ಮತ್ತು ರಾಜ್ಯ ಇವೆರಡರ ಮಧ್ಯ ಭಿನ್ನತೆಯನ್ನು ಮಾಡುತ್ತಾರೆ). ಅವರ ತತ್ವದ ಪ್ರಕಾರ, ಯೇಸು ದಾವೀದನ ಯಥಾವತ್ತಾದ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ, ಆಲಯವನ್ನು ಪುನ ಕಟ್ಟುತ್ತಾನೆ ಮತ್ತು ಒಂದು ಸಾವಿರ ವರ್ಷಗಳ ವರೆಗೆ ಭೂಲೋಕದಲ್ಲಿ ಆಳುತ್ತಾನೆ. ಪ್ರಕಟನೆ 20:2-5ರ "ಸಾವಿರ ವರ್ಷಗಳು" ಕೇವಲ ಒಂದು ಚಿನ್ಹೆಯಾಗಿದೆ ಎಂದು ತಿಳುಕೊಳ್ಳುವಲ್ಲಿ ಅವರು ವಿಫಲರಾಗಿದ್ದಾರೆ. (ಪ್ರಕಟನೆಯಲ್ಲಿನ ಅನೇಕ ಸಂಖ್ಯೆಗಳು ಹಾಗೆ ಇವೆ). ಇದು "ಸರ್ವ ಅಧಿಕಾರವು" ಕ್ರಿಸ್ತನಿಗೆ ಕೊಡಲ್ಪಟ್ಟಿದೆ ಎಂದು ಸೂಚಿಸುತ್ತದೆ (ಮತ್ತಾಯ 28:18). ಅಪೊಸ್ತಲರ ಕೃತ್ಯಗಳು 2ರ ಮೊದಲ ಪ್ರಸಂಗದಲ್ಲಿ, ಪೇತ್ರನು ಯೇಸುವು ಈಗ ದಾವೀದನ ಸಿಂಹಾಸನದ ಮೇಲೆ ಕೂತುಕೊಂಡಿದ್ದಾನೆಂದು ಮತ್ತು ಈಗ ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಕೂತುಕೊಂಡು ಆಳುತ್ತಿದ್ದಾನೆಂದು ಪ್ರಕಟಿಸಿದನು.ಅಪೊಸ್ತಲರ ಕೃತ್ಯದಲ್ಲಿ ಅನೇಕ ಭಾಗಗಳು ಪ್ರಿಮಿಲ್ಲೆನಿಯಾಲಿಸಮಿನ ತಪ್ಪುಗಳನ್ನು ಬಯಲು ಮಾಡುತ್ತದೆ.

**ಪ್ರಿಮಿಲ್ಲೆನಿಯಲಿಸ್ಟಗಳು** - ಪ್ರಿಮಿಲ್ಲೆನಿಯಾಲಿಸಮ್ "Premillenialism" ನೋಡಿರಿ.

**ಫರಿಸಾಯರು (*pharisaioi*)** - "ಫರಿಸಾಯರು" ಇದು ಇಬ್ರಿಯ ಪದದಿಂದ ಬಂದದ್ದಾಗಿದ್ದು "ಬೇರೆ ಯಾದವರು" ಎಂಬರ್ಥವನ್ನು ಕೊಡುವುದಾಗಿದೆ. ಒಡಂಬಡಿಕೆಯ ಮಧ್ಯದ ಸಮಯದಲ್ಲಿ ಮೆಕ್ಕಿಬೀಯ ಆಡಳಿತದ ಆರಂಭದ ದಿನಗಳಲ್ಲಿ ಒಳಪಂಗಡವು ಎದ್ದಿತು. ಒಳಪಂಗಡಗಳ ಆರಂಭದ ಇತಿಹಾಸದಲ್ಲಿ ಫರಿಸಾಯರು ತಮ್ಮನ್ನು ತಾವು ಇಂಥ ರಾಜಕೀಯ ಗುಂಪುಗಳಿಂದ ಬೇರೆಮಾಡಿಕೊಂಡರು. ಯೇಸುವಿನ ದಿನಗಳಲ್ಲಿ, ಅವರು ತಮ್ಮನ್ನು ತಾವು ಆಚರಣೆಗಳಲ್ಲಿ ಶುದ್ಧತೆಯನ್ನು ಕಾಪಾಡಿಕೊಳ್ಳದಿದ್ದವರಿಂದ ಮತ್ತು ಇನ್ನೂ ಕೆಲವರು ಸಾಮಾನ್ಯ ದೀವಾನದಿಂದ ಚಿಕ್ಕವುಗಳಲ್ಲಿಯೂ ವಿವರವಾಗಿ ಕಾಣುವ ಧರ್ಮಶಾಸ್ತ್ರದ ನಿಯಮಗಳ ಪಾಲನೆಮಾಡುವವರು ಎಂದು ತಮ್ಮನ್ನು ಬೇರೆಮಾಡಿಕೊಂಡಿದ್ದನ್ನು ಕಂಡರು. ಅವರು ಯೆಹೂದಿ ಧರ್ಮದ "ಕಟ್ಟುನಿಟ್ಟಾದ ಪಂಗಡದವರು ಆಗಿದ್ದರು" (ಅಪೊಸ್ತಲರ ಕೃತ್ಯಗಳು 26:5). ಅನೇಕ ಶಾಸ್ತ್ರಿಗಳು ಈ ಪಂಗಡಕ್ಕೆ ಸೇರಿದವರಾಗಿದ್ದರು. ಅವರು ಮಾನವರ ಸಂಪ್ರದಾಯಗಳು ದೇವರ ಆಜ್ಞೆಯಂತೇ ಸಮಾನವಾಗಿ ಒಟ್ಟಾಗಿ ಕಟ್ಟಲ್ಪಟ್ಟಿವೆ ಎಂದು ಪರಿಗಣಿಸುವವರಾಗಿದ್ದರಿಂದ, (ಮತ್ತಾ 15:1-9), ಈ ದಿನ ನಾವು ಅವರನ್ನು ದೈವಶಾಸ್ತ್ರೀಯ "ನ್ಯಾಯಸ್ಥರು" ಎಂದು ಕರೆಯುತ್ತೇವೆ. ನಿಕೋದೇಮನು ಒಬ್ಬ ಫರಿಸಾಯನಾಗಿದ್ದನು (ಯೋಹಾನ 3:1) ಅದರಂತೆ

ಪೌಲನು ಸಹ (ಫಿಲಿಪ್ಪಿ 3:5; ಗಲಾತ್ಯ 1:14). ಜೋಸ್ಫಸ್‌ನ ಬರಹಗಳು ಈ ಪಂಗಡದಲ್ಲಿನ ಜನಸಂಖ್ಯೆಯು ಹೆಚ್ಚಿರಲಿಲ್ಲ ಎಂದು ಸೂಚಿಸುತ್ತವೆ: ಯೇಸುವಿನ ಸಮಯದಲ್ಲಿ, ಅವರು ಕೇವಲ ಆರು ಸಾವಿರ ಜನ ಇದ್ದರು, ಅವರು ಸದ್ದುಕಾಯರಿಂದ ಅನೇಕ ವಿಧದಲ್ಲಿ ಬೇರೆಯಾಗಿದ್ದರು: ಅವರಿಗೆ ಯಾವ ರಾಜಕೀಯ ಮಹತ್ವಾಕಾಂಕ್ಷೆಯು ಇರಲಿಲ್ಲ; ಅವರು ಆತ್ಮಗಳನ್ನು, ದೂತರನ್ನೂ ಮತ್ತು ಸತ್ತವರಿಗೆ ಪುನರುತ್ಥಾನವನ್ನೂ ನಂಬುವವರಾಗಿದ್ದರು (ಅಪೊಸ್ತಲ ಕೃತ್ಯಗಳು 23:8); ಅವರು ಜನರಲ್ಲಿ ಜನಪ್ರೀಯರಾಗಿದ್ದರು, ಅವರಲ್ಲಿ ಕೆಲವರು ಕ್ರೈಸ್ತರಾದರು (ಅಪೊಸ್ತಲರ ಕೃತ್ಯಗಳು 15:5; 23:6); ಮತ್ತು ಅವರ ಪಂಗಡವು ಯೆರೂಸಲೇಮಿನ ನಾಶನದ ನಂತರವೂ ಮುಂದುವರೆಯಿತು.

**ಮಾರನಾಥಾ** (***marana tha***) - "ಮಾರನಾಥಾ" ಪದವು ಅರಾಮಾಯಿಕ ಭಾಷೆಯ "ಕರ್ತನು" ಮತ್ತು "ಭಾ" ಪದಗಳನ್ನು ಜೋಡಿಸುತ್ತದೆ. ಅದು ಒಂದು ವಾಕ್ಯದ ರೂಪ ಅಥವಾ ಭಾರದ ಪ್ರಾರ್ಥನೆ ಆಗಬಹುದು.

**ಮೆಸ್ಸಿಯ** - ಕ್ರಿಸ್ತ ನೋಡಿರಿ.

**ಯೇಸು** (***Iesous***, ಉಚ್ಚಾರ: "ಯಾಸೌಸ್") - "ಯೇಸು" ಅಂದರೆ "ರಕ್ಷಕ" ಎಂದು ಹೇಳುವದು ಸಹಜ, ಆದರೆ "ರಕ್ಷಕ" ಪದಕ್ಕೆ ಗ್ರೀಕ್ ಭಾಶೆಯಲ್ಲಿ ಇನ್ನೊಂದು ಪದ ಇದೆ: ಸೋಟರ್ *soter.* "ಆತನಿಗೆ ಯೇಸು ಎಂದು ಹೆಸರಿಡಬೇಕು 'ಯೆಹೋವನು ರಕ್ಷಿಸುತ್ತಾನೆ', ಯಾಕೆಂದರೆ ಆತನು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ರಕ್ಷಿಸುತ್ತಾನೆ" (ಮತ್ತಾಯ 1:21) ಎಂದು ದೂತನು ಯೇಸೇಫನಿಗೆ ಹೇಳಿದಾಗ, ಯೇಸು ನಿಜವಾಗಲೂ ಯೆಹೋವನು ಎಂದು ಹೇಳುತ್ತಿದ್ದನು (ಅಂದರೆ ದೈವೀಕನು)! ಅಂದಿನ ದಿನಗಳಲ್ಲಿ "ಯೇಸು" ಒಂದು ಸಾಮಾನ್ಯ ಗ್ರೀಕ್ ಹೆಸರಾಗಿತ್ತು. (ಕೊಲೊಸ್ಸೆ 4:11; ಅಪೊಸ್ತಲರ ಕೃತ್ಯಗಳು 13:6) "ಯೆಹೋವನು ರಕ್ಷಿಸುತ್ತಾನೆ" ಎಂಬ ಅರ್ಥದ "ಜೋಹೋಶುವ" ಪದದ ಕಿರು ರೂಪ "ಯೆಹೋಶುವ" ಒಂದು ಇಬ್ರಿಯ ಪದ. ಇದರ ಗ್ರೀಕ್ ಸಮಾನ ಪದವೇ "ಯೇಸು."

**ರಾಜ್ಯ** (***basileia***) - ರಾಜ್ಯ ಎಂದು ಅನುವಾದಿಸಲ್ಪಟ್ಟ ಪದ ಸಾರ್ವಭೌಮತ್ವ ಮತ್ತು ಆಳ್ವಿಕೆಯನ್ನು ಸೂಚಿಸುತ್ತದೆ. ವಿಶೇಷ ಅರ್ಥದ ರೂಪದಲ್ಲಿ ಅದು ದೇವರ ಪ್ರಾಂತ್ಯವನ್ನು ಸೂಚಿಸುತ್ತದೆ. ದೇವರು ಸರ್ವಸ್ವವನ್ನು ಆಳುವವನು, ಆದರೆ ಹೊಸ ಒಡಂಬಡಿಕೆಯಲ್ಲಿ ತನ್ನ ಜನರನ್ನು (ಆತನ ಆಳ್ವಿಕೆಗೆ ತಮ್ಮನ್ನು ಸಮರ್ಪಿಸಿದವರು) ಆಳುವ ಅರ್ಥದಲ್ಲಿ "ರಾಜ್ಯ" ಪದವನ್ನು ಬಳಸಲಾಗಿದೆ. ಕೆಲವೊಮ್ಮೆ ಸಭೆಯನ್ನ ಸೂಚಿಸಲು ಈ ಪದವನ್ನು ಬಳಸಲಾಗಿದೆ (ಮತ್ತಾಯ 16:18); ಈ ಪದದ ಜೊತೆಗೆ ಬಳಸಲಾಗುವ ಶಬ್ಧಗಳಿಂದ ಅಂದರೆ "ದೇವರು" ಅಥವಾ "ಪರಲೋಕದ" (2 ಪೇತ್ರ 1:11). ಅದರ ಅರ್ಥನಿರ್ಣಯವಾಗುವದಿಲ್ಲ, ಆದರೆ ಸಂದರ್ಭದಿಂದ. ಅಪೊಸ್ತಲರ ಕೃತ್ಯದಲ್ಲಿ ಸಮಾನ್ಯವಾಗಿ ಲೂಕನು ಈ ಪದ ಸಭೆಯನ್ನು ಸೂಚಿಸಲು ಉಪಯೋಗಿಸಿದನು. ಆದರೆ ಒಂದು ಸಾರೆ ಪರಲೋಕ ಸೂಚಿಸಲು ಪ್ರಯೋಗಿಸಿದ (ಅಪೊಸ್ತಲರ ಕೃತ್ಯಗಳು 14:22).

**ಸಭೆ/ಚರ್ಚ್** (***ekklesia***) - "ಚರ್ಚ್" ಅಥವಾ "ಸಭೆ" ಎಂಬ ಪದವು ಸಂಕೀರ್ಣ ಗ್ರೀಕ ಪದ ಎಕ್ಲೇಸಿಯಾ *ekklesia* ಅಥವಾ *ecclesia* ದಿಂದ ಭಾಷಾಂತರಸಲ್ಪಟ್ಟಿದೆ. ಈ ಗ್ರೀಕ ಪದವು ಆಂಗ್ಲ ಭಾಷೆಯ ಪದ "ಎಕ್ಲೇಸಿಯಾಸ್ಟಿಸ್" "Ecclesiastes" (ಸಭೆಯ ಮನುಷ್ಯ) ಮತ್ತು ಎಕ್ಲೆಸಿಯಾಸ್ಟಿಕಲ, ಅಂದರೆ ಸಭೆಗೆ ಸಂಬಂಧ ಪಟ್ಟದ್ದು ಎಂದಿದೆ. ಎಕ್ಲೆಸಿಯ, *ekklesia* ಇದರಲ್ಲಿ ಎಕ್ *ek* ("ಹೊರಗೆ") ಮತ್ತು ಕ್ರಿಯಾಪದ ಕಲಿಯೊ *kaleo* (ಕರೆಯಲ್ಪಡುವದು) ಎರಡನ್ನೂ ಸೇರಿಸಿದೆ. ಅಂದರೆ "ಕರೆಯಲ್ಪಟ್ಟವರು." ಇಂದು ಸಮಾಜದಲ್ಲಿ ಅದು "ಒಂದು ಕೂಟ"ವನ್ನು ಸೂಚಿಸುತ್ತದೆ. (ಅಂದರೆ ಒಟ್ಟಾಗಿ ಕರೆಯಲ್ಪಟ್ಟ ಜನರು) (ಹೋಲಿಸು ಅಪೊಸ್ತಲರ ಕೃತ್ಯಗಳು 19:41). ಯೇಸು ಹೇಗೂ ಒಂದು ವಿಶೇಷ ಅರ್ಥವನ್ನು ಕೊಟ್ಟನು - ಆತನವರೇ ಆದ "ಕರೆಯಲ್ಪಟ್ಟವರು" (ಮತ್ತಾಯ 16:18) - ಅಪೊಸ್ತಲರ ಕೃತ್ಯದಲ್ಲಿ ಈ

ವಿಶೇಷ ರೀತಿಯಲ್ಲಿಯೇ ಕರೆಯಲಾಗಿದೆ. ಈ ಪದವು ಸಾರ್ವತ್ರಿಕ ಸಭೆಯ (ಅಪೊಸ್ತಲರ ಕೃತ್ಯಗಳು 2:47; KJV), ಸ್ಥಾನಿಕ ಸಭೆ (ಅಂದರೆ ಸಭೆಗಳು ರೋಮ 16:16) ಅಥವಾ ಸಾರ್ವಜನಿಕ ಆರಾಧನಾ ಸ್ಥಳಗಳು (1 ಕೊರಿಂಥ 14:12, 19, 23, 28) ಎನ್ನುವ ರೀತಿಯಲ್ಲಿ ಉಪಯೋಗಿಸಬಹುದು. ಅಪೊಸ್ತಲರ ಕೃತ್ಯದಲ್ಲಿ, ಲೂಕನು ಸ್ಥಳಿಯ ಸಭೆಯನ್ನು ಸೂಚಿಸಲು ಈ ಪದವನ್ನು ಉಪಯೋಗಿಸಿದ್ದಾನೆ (ಅಂದರೆ ಒಂದು ಕ್ಷೇತ್ರದಲ್ಲಿ ಕರೆಯಲ್ಪಟ್ಟವರು).

**ಸದ್ದುಕಾಯರು** (***Saddoukaioi***) - ಸದ್ದುಕಾಯರ ಈ ಪಂಗಡವು ಉದ್ಭವಗೊಂಡಿದ್ದು ಒಡಂಬಡಿಕೆಗಳ ಮಧ್ಯದಲ್ಲಿ. ಅವರು ಐಶ್ವರ್ಯವಂತರಾಗಿದ್ದು ಆಡಂಬರವುಳ್ಳ ವ್ಯಕ್ತಿಗಳಾಗಿದ್ದರು. ಅವರು ಪಾಲಿಸ್ತೈನಲ್ಲಿ ಅಲ್ಪಸಂಖ್ಯಾತರಗಿದ್ದರು, ಆದರೆ ಅವರು ರೋಮಾದೊಂದಿಗಿನ ಸಹಕಾರದಿಂದ ಒಪ್ಪಿಗೆ ನೀಡಿದ್ದರಿಂದ ಅಧಿಕಾರವನ್ನು ಮತ್ತು ಪ್ರಭಾವವನ್ನೂ ಬೀರುವಂತವರೂ ಆಗಿದ್ದರು. ಹೆರೋದನ ಆಳ್ವಿಕೆಯಲ್ಲಿನ ಪ್ರತಿಯೊಬ್ಬ ಮಾಹಾಯಾಜಕನಿಂದ ಕ್ರಿ.ಶ 70ರಲ್ಲಿ ಯೆರೂಸಲೇಮಿನ ದೊಡ್ಡ ನಾಶನದವರೆಗೆ ಇದ್ದ ಎಲ್ಲರೂ ಈ ಪಂಗಡಕ್ಕೆ ಸೇರಿದ್ದರು. ಸದ್ಧುಕಾಯರು ವಿಚಾರವಾದಿಗಳು ಆಗಿದ್ದರು. (ನಾವು ದೈವಶಾಸ್ತ್ರೀಯವಾಗಿ ಅವರನ್ನು "ಉದಾರವಾದಿಗಳು" ಎಂದು ಬಿರುದನ್ನು ಕೊಡಬಹುದು); ಅವರು ಆತ್ಮಲೋಕವನ್ನು ಪುನರುತ್ಥಾನವನ್ನೂ, ಅಥವಾ ಮರಣಾನಂತರದ ಜೀವನವನ್ನು ನಂಬುವವರಾಗಿರಲಿಲ್ಲ (ಮಾರ್ಕ 12:18; ಅಪೊಸ್ತಲರ ಕೃತ್ಯಗಳು 23:6-8), ಯೆಹೂದಿಗಳು ರೋಮದ ವಿರುದ್ಧ ತಿರುಗಿಬಿದ್ದಾಗ, ಜಿಲೋಟನು ಸದ್ದುಕಾಯರನ್ನು ಅವರ ರೋಮಾದೊಂದಿಗಿನ ಸಹಯೋಗತ್ವಕ್ಕಾಗಿ ಅವರನ್ನು ಕೊಂದನು.

**ಸನ್ಹೆದ್ರೀನ್** (***sunedrion***) - ಸನ್ಹೆದ್ರೀನ್ ಇದು ಸಂಯುಕ್ತಪದದ ಅರ್ಥವಾಗಿದ್ದು "ಜೊತೆಗೂಡಿ ಕೂತುಕೊಳ್ಳುವದು" ಎಂದಾಗುತ್ತದೆ. ಸನ್ಹೆದ್ರೀನ ಕೆಲಸಾರಿ ಸ್ಥಳೀಯ ನ್ಯಾಯ ತೀರ್ಪಿಗಾಗಿ ಕೂತುಕೊಳ್ಳುವ ನ್ಯಾಯಮಂಡಳಿಯನ್ನು ಸೂಚಿಸುತ್ತದೆ (ಮತ್ತಾಯ 10:17). ಸಾಮಾನ್ಯ ವಾಗಿ, ಹೇಗೋ, ಈ ಪದವು ಹೊಸ ಒಡಂಬಡಿಕೆಯಲ್ಲಿ ಯೆಹೂದಿಗಳ ರಾಷ್ಟ್ರೀಯ ನ್ಯಾಯಮಂಡಳಿಯನ್ನು ಸೂಚಿಲು ಬಳಿಕೆಯಾಗಿದೆ. (ಯೆಹೂದಿ "ಉನ್ನತ ನ್ಯಾಯಾಲಯ"). "ನ್ಯಾಯಮಂಡಲಿ" ಈ ಪದವು KJV ಮತ್ತು NASB ಗಳಿಂದ ಭಾಷಾಂತರವಾಗಿವೆ, ಆದರೆ "ಸನ್ಹೆದ್ರಿನ" ಇದು ಯಾವಾಗಲೂ NIVಯಿಂದ ಭಾಷಾಂತರಗೊಂಡಿದೆ. ಹೊಸ ಒಡಂಬಡಿಕೆಯಲ್ಲಿ, ಈ ನ್ಯಾಯಮಂಡಳಿಯು "ಇಸ್ರಾಯೇಲರ (ಮಕ್ಕಳ) ಮಂಡಳಿಯ ಸಭೆ" ಎಂದೂ (ಅಪೊಸ್ತಲರ ಕೃತ್ಯಗಳು 5:21) ಮತ್ತು "ಹಿರೀಯರ ಸಭೆ" ಎಂದೂ (ಅಪೊಸ್ತಲರ ಕೃತ್ಯಗಳು 22:5) ಕರೆಯಲ್ಪಟ್ಟಿದೆ. ಸನ್ಹೆದ್ರೀನ್ ಕ್ರಿ.ಪೂ 200 ವರ್ಷಗಳ ಹಿಂದಿನ ಇತಿಹಾಸದಲ್ಲಿ ಯೆಹೂದಿ ರಾಷ್ಟ್ರದ ಆಂತರಿಕ ಸಂಗತಿಗಳನ್ನು ಕ್ರಮಗೊಳಿಸುವ ಸಮಿತಿಯಾಗಿ ಮೊಟ್ಟಮೊದಲಬಾರಿ ಕಾಣಿಸಿಕೊಂಡಿತು. ಇದು ಯೆಹೂದಿಗಳು ರೋಮನ್ನರಿಗೆ ಬಂಡೇಳುವವರೆಗೆ ಅಂದರೆ ಕ್ರಿ. ಶ 66ವರೆಗೆ ರೊಮನ್ನರ ಆಳ್ವಿಕೆಯವರೆಗೆ ತನ್ನ ಪಾತ್ರವನ್ನು ನಿರ್ವಹಿಸುತಿತ್ತು. ಸಾಂಪ್ರದಾಯಿಕವಾಗಿ, ಸನ್ಹೆದ್ರೀನಲ್ಲಿ ಎಪ್ಪತ್ತು ಜನ ಸದಸ್ಯರಿದ್ದರು. (ನ್ಯಾಯಮಂಡಳಿಯ ಎಪ್ಪತ್ತು ಜನರು ಅವರು ತಮ್ಮನ್ನು ತಾವು ಮೋಶೆಯ ಐತಿಹಾಸಿಕ ಉತ್ತರಾಧಿಕಾರಿಗಳು ಎಂದು ಪರಿಗಣಿಸಿಕೊಳ್ಳುತ್ತಿದ್ದರು ಅರಣ್ಯಕಾಂಡ 11:10-25) - ಮಹಾಯಾಜಕರು ಅಧ್ಯಕ್ಷನಂತೆ ಕಾರ್ಯಮಾಡುತ್ತಿದ್ದನು. ಸದಸ್ಯರಲ್ಲಿ ಬಹುಸಂಖ್ಯೆಯು ಸದ್ಧುಕಾಯರದ್ದಾಗಿರುತ್ತಿತ್ತು (ಅಪೊಸ್ತಲರ ಕೃತ್ಯಗಳು 5:17). (ನೋಡಿರಿ ಸದ್ಧುಕಾಯರು), ಆದರೆ ನ್ಯಾಯಮಂಡಳಿಯ ಸಹ ಫರಿಸಾಯರ ಶಕ್ತಿಯುತ ಅಲ್ಪಸಂಖ್ಯಾತರಿಂದ ಕೂಡಿತ್ತು (ಹೆಚ್ಚಿನ ಶಾಸ್ತ್ರಿಗಳು ಫರಿಸಾಯರು) (ನೋಡಿ, "ಫರಿಸಾಯರು"). ಇತರ ಜವಾಬ್ದಾರಿಗಳಲ್ಲಿ, ನ್ಯಾಯಮಂಡಳಿಯಲ್ಲಿರುವವರು ಯೆಹೂದಿ ನಂಬಿಕೆಯನ್ನು ರಕ್ಷಿಸುವ ಸದಸ್ಯರಾಗಿದ್ದರು. (ಹೊಸ ತತ್ವಗಳನ್ನು ಮತ್ತು ಬೋಧಕರನ್ನು ಪರೀಕ್ಷಿಸುತ್ತಿದ್ದರು: ನೋಡಿ ಧರ್ಮೋಪದೇಶಕಾಂಡ 13).

**ಸುವಾರ್ತೆ** (***euangelion***) - "ಸುವಾರ್ತೆ" ಇದು ಗ್ರೀಕನ ಸಂಕೀರ್ಣ ಪದ *euangelion* ದಿಂದ ಬಂದದ್ದು. *Eu* ಅಂದರೆ "ಒಳ್ಳೆಯದು" ಅಥವಾ "ಉತ್ತಮ." *Angelion* ಅಂದರೆ "ಸಂದೇಶ," "ಸುದ್ದಿ" ಅಥವಾ ಸಮಾಚಾರ." ಈ ಪದದ ಅರ್ಥವು "ಒಳ್ಳೇ ಸುದ್ದಿ" ಅಥವಾ "ಸಂತೋಷದ ಸಮಾಚಾರ." ಈ ಪದವು ಯಾವದೇ ಒಳ್ಳೆ ಸುದ್ದಿಯನ್ನು ಸೂಚಿಸಬಹುದು. ಆದರೆ ಹೊಸ ಒಡಂಬಡಿಕೆಯಲ್ಲಿ ಅದು ಸಾಮಾನ್ಯವಾಗಿ ಯೇಸುವನ್ನು ಕುರಿತ ಒಳ್ಳೆ ಸುದ್ದಿಯನ್ನು ಸೂಚಿಸುತ್ತದೆ. ಪೌಲನು "ಒಳ್ಳೆಯ ಸುದ್ದಿಯ" ಹೃದಯವನ್ನು ಗುರುತಿಸಿದನು. ಅದನ್ನು ಅವನು ಯೇಸುವಿನ ಮರಣ, ಹೂಣಲ್ಪಟ್ಟದ್ದು ಮತ್ತು ಪುನರುಥ್ಥಾನದ ಮೂರು ಮುಖದ ಸತ್ಯವನ್ನಾಗಿ ಗುರುತಿಸಿದನು (1 ಕೊರಿಂಥ 15:1-4). ನಾವು ಸುವಾರ್ತೆಗೆ ವಿಧೇಯರಾದ (ರೋಮಾಪುರ 10:16; 1 ಪೇತ್ರ 4:17; 2 ಥೆಸಲೋನಿಕ 1:8) ಬೇಕಾಗಿರುವದರಿಂದ ನಾವು ಯೇಸು ನಮಗೋಸ್ಕರ ಮಾಡಿದಕ್ಕೆ ಹೇಗೆ ಪ್ರತಿಸ್ಪಂದಿಸುತ್ತೇವೆ ಎಂದು ಸಂಪೂರ್ಣ ಸುವಾರ್ತಾ ಸಂದೇಶ ಒಳಗೊಂಡಿದೆ.

**ಸೆಪ್ಟುಜಿಯನ್ಟ** - "ಸೆಪ್ಟುಜಿಯನ್ಟ" ಇದು ಲಾಟಿನ ಭಾಷೆಯ ಒಂದು ರೂಪ. ಅದರ ಅರ್ಥ "ಎಪ್ಪತ್ತು." KJVಇದು ಕ್ರಿ. ಪೂ ಮೂರನೇಯ ಶತಮಾನದಲ್ಲಿ ಮಾಡಲ್ಪಟ್ಟ ಹಳೆ ಒಡಂಬಡಿಕೆಯ ಗ್ರೀಕ ಭಾಷಾಂತರ. ಇದು ಎಪ್ಪತ್ತು ಭಾಷಾಂತರಕಾರರಿಂದ ಮಾಡಲ್ಪಟ್ಟದ್ದು. ಪಂಡಿತರ ಈ ಕಾರ್ಯದಲ್ಲಿ, ಈ ಭಾಷಾಂತರವು ಸಾಮಾನ್ಯವಾಗಿ ಎಪ್ಪತ್ತನ್ನು ಸೂಚಿಸುವ ರೋಮ ಸಂಖ್ಯೆ ಉಪಯೋಗಿಸಲಾಗಿದೆ. ಯೇಸು ಮತ್ತು ಅಪೊಸ್ತಲರು ಸಮಾನ್ಯವಾಗಿ ಗ್ರೀಕ ಭಾಷಾಂತರದಿಂದ ಉಲ್ಲೇಖಿಸಿದ್ದಾರೆ. ಇಬ್ರಿಯ ಭಾಷೆಯಿಂದ ಭಾಷಾಂತರಿಸಲ್ಪಟ್ಟ ಹಳೆ ಒಡಂಬಡಿಕೆಯಲ್ಲಿ ಉಲ್ಲೇಖಗಳು ಯಾಕೆ ಸ್ವಲ್ಪ ವಿಭಿನ್ನವಾಗುತ್ತವೆ ಎಂದು ಅದು ವಿವರಿಸುತ್ತದೆ.

**ಹೇಡಿಸ** (***hades***) - ಇದು ನಿಜಾಗಿಯೂ "ಕಾಣದ" ಎಂಬ ಅರ್ಥ ಕೊಡುತ್ತದೆ. ಇದನ್ನು ಗ್ರೀಕರು "ಕಾಣದ ಜಗತ್ತನ್ನು" ಸೂಚಿಸುವದಕ್ಕೆ ಉಪಯೋಗಿಸುತ್ತಿದ್ದರು. ಹೊಸ ಒಡಂಬಡಿಕೆಯಲ್ಲಿ ಯೇಸು ಮತ್ತು ಇತರರು ಉಪಯೋಗಿಸಿದಂತೆ, ಮರಣ ಮತ್ತು ಪುನರುತ್ಥಾನದ ಮಧ್ಯ ಸತ್ತವರು ಇರುವ ಸ್ಥಿತಿಯನ್ನು ಸೂಚಿಸಿತು. ಐಶ್ವರ್ಯವಂತ ಮತ್ತು ಬಡ ಲಾಜರನ ಕತೆಯು (ಲೂಕ 16:19-31) ಈ ಹೇಡಿಸ ಜಗತ್ತಿನ ಚಿತ್ರವನ್ನು ಕೊಡುತ್ತದೆ.

# ಅಪೊಸ್ತಲರ ಕೃತ್ಯ ಪುಸ್ತಕದ ಕಾಲಾನುಕ್ರಮ

ಕ್ರೈಸ್ತ ಸಭೆಯ ಪ್ರಾರಂಭದ ಘಟನೆಗಳ ದಿನಾಂಕಗಳ ಕುರಿತು ನಮಗೆ ಖಚಿತವಾಗಿ ಹೇಳುವದಕ್ಕೆ ನಮ್ಮ ಬಳಿ ಅಲ್ಪ ಮಾಹಿತಿ ಇದೆ. ಅಪೊಸ್ತಲರ ಕೃತ್ಯದ ಮೊದಲ ಭಾಗದ ಕುರಿತು ಸಂಪ್ರದಾಯವಾದಿ ಪಂಡಿತರು, ವಿಭಿನ್ನ ಅಭಿಪ್ರಾಯವುಳ್ಳವರಾಗಿದ್ದಾರೆ. ಆದರೆ, ಹೆಚ್ಚಾದ ಸಂಪ್ರದಾಯವಾದಿ ಪಂಡಿತರು, ಅಪೊಸ್ತಲರ ಪುಸ್ತಕದ ಕೊನೆಯ ಭಾಗದ ದಿನಾಂಕಗಳ ಕುರಿತು ಒಬ್ಬರಿಗೊಬ್ಬರು ಕೆಲವೇ ವರ್ಷಗಳ ಅಂತರದಲ್ಲಿದ್ದಾರೆ. ಯಾಕೆಂದರೆ ಅನೇಕ ಐಹಿಕ ದಿನಾಂಕಗಳನ್ನು ಅಪೊಸ್ತಲರ ಕೃತ್ಯದ ಇತಿಹಾಸಕ್ಕೆ ಹೊಂದಿಸಬಹುದಾಗಿದೆ.

1. ಮೊದಲ ಪಂಚಾಶತ್ತಮ, 30.[1]
2. ಯೆರೂಸಲೇಮ್ ಸಭೆಯ ಚದುರುವಿಕೆ ಮತ್ತು ಯೆರೂಸಲೇಮಿನ ಹೊರಗೆ ಸುವಾರ್ತಾ ಸೇವೆ (ಸಮಾರ್ಯದವರು, ನಪುಂಸಕ) 33/34.
3. ಸೌಲ ಪರಿವರ್ತನೆ 34/35.
4. ದಮಸ್ಕದಿಂದ ಸೌಲದ ತಪ್ಪಿಸಿಕೊಳ್ಳುವಿಕೆ, 37.
5. ಯೆರೂಸಲೇಮಿನ ಹೊರಗೆ ಸುವಾರ್ತಾ ಸೇವೆಯ ಪ್ರಸರಣ (ಕೊರ್ನೇಲ್ಯನ ಪರಿವರ್ತನೆ, ಅಂತಿಯೋಕ್ಯದಲ್ಲಿ ಸಭೆಯ ಸ್ಥಾಪನೆ ಇತ್ಯಾದಿ.), 34-43.
6. ಯಾಕೋಬನ ಮರಣ, ಸೆರೆಯಿಂದ ಪೇತ್ರನ ಬಿಡುಗಡೆ, ಮತ್ತು ಮೊದಲ ಹೆರೋದ ಅಗ್ರಿಪ್ಪನ ಮರಣ, 44.
7. ಯೆರೂಸಲೇಮಿನಲ್ಲಿ ಬರಗಾಲದಿಂದ ಬಿಡುಗಡೆ, 46.
8. ಪೌಲನು ಮೊದನೇಯ ಸುವಾರ್ತಾ ಪ್ರಯಾಣ, 46-48.
9. ಯೇರೂಸಲೇಮಿನಲ್ಲಿ ಹಿರಿ ಸಭೆಯ ಕೂಟ, 49.

*ಗಲಾತ್ಯದವರಿಗೆ ಬರೆಯಲ್ಪಟ್ಟಿತು 48/49??*

10. ರೋಮಿನಿಂದ ಯಹೂದ್ಯರು ಹೊರಹಾಕಲ್ಪಟ್ಟದ್ದು, 49.
11. ಪೌಲನ ಎರಡನೇಯ ಸುವಾರ್ತಾ ಪ್ರಯಾಣ, 49-52.

*1 ಕೊರಿಂಥದಿಂದ ಥೆಸಲೋನಿಕದವರಿಗೆ ಬರೆಯಲ್ಪಟ್ಟದ್ದು, 50.*
*2 ಕೊರಿಂಥದಿಂದ ಥೆಸಲೋನಿಕದವರಿಗೆ ಬರೆಯಲ್ಪಟ್ಟದ್ದು, 50/51.*

12. ಪೌಲನ ಮೂರನೇಯ ಸುವಾರ್ತಾ ಪ್ರಯಾಣ ಮತ್ತು ಯೆರೂಸಲೇಮಿಗೆ ಪ್ರಯಾಣ, 52-57.

(*ಈ ಸಮಯದಲ್ಲಿ ಯಾವದೋ ಸ್ಥಳದಲ್ಲಿ ಗಲಾತ್ಯದವರಿಗೆ ಬರೆಯಲ್ಪಟಿತು.*)
*1 ಕೊರಿಂಥ ಎಫೆಸದಿಂದ ಬರೆಯಲ್ಪಟ್ಟದ್ದು, 54/55.*
*2 ಕೊರಿಂಥ ಮೆಸೆದೋನಿಯದಿಂದ ಬರೆಯಲ್ಪಟ್ಟದ್ದು, 55/56.*
*ರೋಮಾಪುರದವರಿಗೆ ಕೊರಿಂಥದಿಂದ ಬರೆಯಲ್ಪಟ್ಟದ್ದು, 56.*

13. ಪೌಲನು ಸೆರೆಹಿಡಿಯಲ್ಪಟ್ಟದ್ದು ಮತ್ತು ಯೆರೂಸಲೇಮ ಮತ್ತು ಕೈಸರದಲ್ಲಿ ಸೆರೆ ಮನೆಗೆ ಹಾಕಲ್ಪಟ್ಟದ್ದು, 57-59.
14. ರೋಮಿಗೆ ಪೌಲನ ಪ್ರಯಾಣ, 59-60.
15. ರೋಮಿನಲ್ಲಿ ಪೌಲನ ಮೊದಲು ಸೆರೆಮನೆಗೆ ಹಾಕಲ್ಪಟ್ಟದ್ದು, 60-62.

*ಎಫೆಸದವರಿಗೆ ರೋಮಿನಿಂದ ಬರೆಯಲ್ಪಟ್ಟದ್ದು.*
*ಕೊಲೊಸ್ಸೆಯವರಿಗೆ ರೋಮಿನಿಂದ ಬರೆಯಲ್ಪಟ್ಟದ್ದು.*
*ಫಿಲೆಮೋನ ರೋಮಿನಿಂದ ಬರೆಯಲ್ಪಟ್ಟದ್ದು.*
*ಫಿಲಿಪ್ಪಿಯವರಿಗೆ ರೋಮಿನಿಂದ ಬರೆಯಲ್ಪಟ್ಟದ್ದು.*

**– ಅಪೊಸ್ತಲರ ಕೃತ್ಯ ಇಲ್ಲಿಗೆ ಮುಕ್ತಾಯವಾಗುತ್ತದೆ –**

16. ಪೌಲನ ಬಿಡುಗಡೆ ಮತ್ತು ಇತರ ಪ್ರಯಾಣ (ಸ್ಪೇನ್ ಮತ್ತು ಇತರ ಸ್ಥಳಗಳು), 63-66 (?).

*1 ತಿಮೋಥೆ ಮೆಸೆದೋನಿಯದಿಂದ ಬರೆಯಲ್ಪಟ್ಟದ್ದು, 64/65 (?).*
*ತೀತ ಮೆಸೆದೋನಿಯದಿಂದ ಬರೆಯಲ್ಪಟ್ಟದ್ದು 65/66.*

17. ಪೌಲನ ಎರಡನೇಯ ಬಾರಿ ಸೆರೆಮನೆಗೆ ಹಾಕಲ್ಪಟ್ಟದ್ದು ಮತ್ತು ಕೊಲ್ಲಲ್ಪಟ್ಟದ್ದು 66/67 (?).

*2 ತಿಮೋಥೆ ರೋಮಿನಿಂದ ಬರೆಯಲ್ಪಟ್ಟದ್ದು, 66/67 (?).*

---
ಟಿಪ್ಪಣಿ

[1]ಮೊದಲಿನ ವ್ಯಾಖ್ಯಾನಕಾರರು ಅಪೊಸ್ತಲರ ಕೃತ್ಯ 2ರ ಘಟನೆಗಳನ್ನು ಕ್ರಿ.ಶ. 33 ಅಥವಾ 34ರಲ್ಲಿ ಇರಿಸುತ್ತಾರೆ. ಜನರು ಯೇಸುವಿನ ಜನನದಿಂದ ದಿನಾಂಕಗಳನ್ನು ಗುರುತಿಸುವದಕ್ಕೆ ಪ್ರಾರಂಭಿಸಿದಾಗಿನಿಂದ, ಅವರು ತಪ್ಪಾದ ಜನಗಣತಿಯಿಂದ ಪ್ರಾರಂಭಿಸಿದ್ದಾರೆ ಎಂದು ಈಗ ಸಾಮಾನ್ಯ ತಿಳುವಳಿಕೆಯಿದೆ. ಯೋಸೇಫ ಮತ್ತು ಮರಿಯಳು ಬೆತ್ಲೆಹೇಮಿಗೆ ಬಂದು ತಮ್ಮ ಹೆಸರನ್ನು ನಮೂದಿಸುವದಕ್ಕಿಂತ ಬಹುಕಾಲ ಮುಂಚಿನಿಂದ ಅವರು ಕಾಲಸೂಚಿಯನ್ನು ಉಪಯೋಗಿದ್ದಾರೆ. ಅದರ ಪರಿಣಾಮವಾಗಿ, ನಮ್ಮ ಪಂಚಾಂಗಗಳು (ಕ್ಯಾಲೆಂಡರ್) ಮೂರರಿಂದ ನಾಲ್ಕು ವರ್ಷ ಬೇರೆ ಯಾಗಿವೆ. ಯೇಸುವಿನ ಜನನದ 33 ವರ್ಷಗಳ ತರುವಾಯ ಮೊದಲು ಪಂಚಾಶತ್ತಮವಾಯಿತು. ಆತರೆ, ಈ ತಪ್ಪಿನಿಂದಾಗಿ ನಮ್ಮ ಪಂಚಾಂಗದಲ್ಲಿ ಅದು ಕ್ರಿ.ಶ. 30ರಲ್ಲಿ ಎಂದು ನಮೂದಿಸಲಾಗಿದೆ.